ಕರ್ನಾಟಕ ಸರ್ಕಾರ

Government of Karnataka

# ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು.

## Raichur Institute of Medical Sciences, Raichur

(ಸರ್ಕಾರದ ಸ್ವಾಯತ್ತ ಸಂಸ್ಥೆ) (Govt. Autonomous Institution)

ಹೈದ್ರಾಬಾದ್ ರೋಡ್, ರಾಯಚೂರು -584102 Hyderabad Road, Raichur -584102

Web. www. rims-raichur.com Phone /Fax-08532-238488/89 Email :info@rims-raichur.com

### 22ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು

ಸನ್ಮಾನ್ಯ ಡಾ॥ ಶರಣ ಪ್ರಕಾಶ ಆರ್. ಪಾಟೀಲ್, ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 15.12.2014ರಂದು ಕೊಠಡಿ ಸಂಖ್ಯೆ. 02, ನೆಲಮಹಡಿ, ಸುವರ್ಣ ಸೌಧ, ಬೆಳಗಾವಿಯಲ್ಲಿ ಜರುಗಿದ ರಿಮ್ಸ್, ರಾಯಚೂರಿನ 22ನೇ ಆಡಳಿತ ಮಂಡಳಿ ಸಭೆಯ ಸಭಾ ನಡುವಳಿಗಳು.

ಸಭೆಯಲ್ಲಿ ಹಾಜರಿದ್ದ ಸದಸ್ಯರು

1. ಶ್ರೀ ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್ - ಅಧ್ಯಕ್ಷರು
   ವೈದ್ಯಕೀಯ ಶಿಕ್ಷಣ ಸಚಿವರು,
   ಕರ್ನಾಟಕ ಸರ್ಕಾರ, ಬೆಂಗಳೂರು. ಹಾಗೂ
   ಅಧ್ಯಕ್ಷರು, ರಾ.ವೈ.ವಿ.ಸಂಸ್ಥೆ, ಆಡಳಿತ ಮಂಡಳಿಯ ಗೌರವಾನ್ವಿತ ಅಧ್ಯಕ್ಷರು

2. ಶ್ರೀ ಶಿವ ಶೈಲಂ, ಭಾ.ಆ.ಸೇ - ಉಪಾಧ್ಯಕ್ಷರು
   ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈ.ಶಿ),
   ಬೆಂಗಳೂರು. ಹಾಗೂ
   ಉಪಾಧ್ಯಕ್ಷರು, ರಾ.ವೈ.ವಿ.ಸಂಸ್ಥೆ, ಆಡಳಿತ ಮಂಡಳಿಯ ಗೌರವಾನ್ವಿತ ಅಧ್ಯಕ್ಷರು

3. ಎಸ್.ಆರ್. ಉಮಾಶಂಕರ್, - ಸದಸ್ಯರು
   ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
   ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.

4. ಶ್ರೀಮತಿ ಲತಾಕುಮಾರಿ.ಕೆ, - ವಿಶೇಷ ಆಹ್ವಾನಿತರು
   ಸರ್ಕಾರದ ಉಪ ಕಾರ್ಯದರ್ಶಿಗಳು,
   ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
   (ವೈ.ಶಿ), ಬೆಂಗಳೂರು.

5. ಡಾ. ಶಂಕರಮಲಪುರೆ - ವಿಶೇಷ ಆಹ್ವಾನಿತರು
   ವಿಶೇಷಾಧಿಕಾರಿಗಳು, ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ,
   ರಾಯಚೂರು.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಸ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಸದಸ್ಯ ಕಾರ್ಯದರ್ಶಿ

6. ಡಾ. ಕವಿತಾ ಪಾಟೀಲ್
ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ರಾಯಚೂರು.

ಡಾ. ಕವಿತಾ ಪಾಟೀಲ್, ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು ಉಪಸ್ಥಿತರಿದ್ದ ಗೌರವಾನ್ವಿತ ಅಧ್ಯಕ್ಷರನ್ನು ಹಾಗೂ ಸದಸ್ಯರುಗಳನ್ನು ಸ್ವಾಗತಿಸುತ್ತಾ ಸನ್ಮಾನ್ಯ ಸಚಿವರು, ವೈದ್ಯಕೀಯ ಶಿಕ್ಷಣ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ ಸಭೆ ಇವರ ಅನುಮತಿಯನ್ನು ಪಡೆದು ಸಭೆಯನ್ನು ಪ್ರಾರಂಭಿಸಲಾಯಿತು.

ಆಡಳಿತ ಮಂಡಳಿ ಸಭೆಯ ಅಧ್ಯಕ್ಷರ ಸಮಕ್ಷಮದಲ್ಲಿ ತೆಗೆದುಕೊಂಡ ನಿರ್ಣಯಗಳು ಈ ಕೆಳಗಿನಂತಿವೆ.

| | |
|---|---|
| ವಿಷಯ ಸೂಚಿ ಸಂಖ್ಯೆ. 01 | ಭಾರತೀಯ ವೈದ್ಯಕೀಯ ಮಂಡಳಿಯು ಈ ಸಂಸ್ಥೆಗೆ ಭೇಟಿ ನೀಡಿ ತಪಾಸಣೆ ವೇಳೆಯಲ್ಲಿ ಗುರುತಿಸಲಾಗಿರುವ ನ್ಯೂನ್ಯತೆಯನ್ನು ಸರಿಪಡಿಸುವ ಕುರಿತು. |

ಕಾರ್ಯದರ್ಶಿಗಳು, ಭಾರತೀಯ ವೈದ್ಯಕೀಯ ಮಂಡಳಿ, ನವದೆಹಲಿ ಇವರ ಪತ್ರ ಸಂಖ್ಯೆ. ಎಂಸಿಐ / - 34 (41) / 2014 – ಮೆಡ್ / ಕರ್ನಾಟಕ / 135721 ದಿನಾಂಕ 21.10.2014ರ ಪತ್ರದಲ್ಲಿ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸಂಬಂಧಿಸಿದ ಈ ಕೆಳಕಂಡ ನ್ಯೂನ್ಯತೆಗಳನ್ನು ಗುರುತಿಸಿರುತ್ತಾರೆ.

1) **Deficiency of Teaching Faculty is 32.7% (i.e 40 out of 122)**

ಸಭೆಯ ತೀರ್ಮಾನ :__

ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ ರಿಮ್ಸ್ ಸಂಸ್ಥೆಗೆ ಮಂಜೂರಾಗಿ ಖಾಲಿ ಉಳಿದಿರುವ ಎಲ್ಲಾ ಬೋಧಕ ಸಿಬ್ಬಂದಿ ಹುದ್ದೆಗಳನ್ನು ಸರ್ಕಾರದ ಅನುಮೋದನೆಯ ಮೇರೆಗೆ ದಿನಾಂಕ 11.08.2014ರಂದು ನೇರ ಸಂದರ್ಶನವನ್ನು ಜರುಗಿಸಿ, ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ. ಆ ಹುದ್ದೆಗಳ ವಿವರ ಈ ಕೆಳಗಿನಂತಿದೆ.

| ಕ್ರ.ಸಂ | ಬೋಧಕ ಸಿಬ್ಬಂದಿ ಹೆಸರು | ಪದನಾಮ | ವಿಭಾಗ | ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕ |
|---|---|---|---|---|
| 1 | ಡಾ. ವಿಜಯಕೃಷ್ಣ | ಪ್ರಾಧ್ಯಾಪಕರು | ಶರೀರ ಕ್ರಿಯಾಶಾಸ್ತ್ರ | 25.09.2014 |
| 2 | ಡಾ. ಬಸವರಾಜ್ ಪಾಟೀಲ್ | ಪ್ರಾಧ್ಯಾಪಕರು | ವಿಧಿ ವೈದ್ಯಶಾಸ್ತ್ರ | 01.10.2014 |
| 3 | ಡಾ. ವೆಂಕಟೇಶ್. ಯು | ಪ್ರಾಧ್ಯಾಪಕರು | ಕಿವಿ ಮೂಗು ಮತ್ತು ಗಂಟಲು ವಿಭಾಗ | 01.10.2014 |
| 4 | ಡಾ. ಶ್ರೀಕಾಂತ್ | ಪ್ರಾಧ್ಯಾಪಕರು | ಜೀವರಸಾಯನ ಶಾಸ್ತ್ರ | 07.10.2014 |
| 5 | ಡಾ. ಭಾಸ್ಕರ್. ಕೆ | ಪ್ರಾಧ್ಯಾಪಕರು | ಎಲುಬು ಮತ್ತು ಕೀಲು ವಿಭಾಗ | 13.10.2014 |
| 6 | ಡಾ. ಶರಣಬಸಪ್ಪ ಕರಡ್ಡಿ | ಸಹ ಪ್ರಾಧ್ಯಾಪಕರು | ವಿಧಿ ವೈದ್ಯಶಾಸ್ತ್ರ | 01.10.2014 |
| 7 | ಡಾ. ರಶ್ಮಿ ನಾಗನಗೌಡರು | ಸಹಾಯಕ ಪ್ರಾಧ್ಯಾಪಕರು | ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ | 25.09.2014 |

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಸ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

| ಕ್ರ.ಸಂ | ಬೋಧಕ ಸಿಬ್ಬಂದಿ ಹೆಸರು | ಪದನಾಮ | ವಿಭಾಗ | ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕ |
|---|---|---|---|---|
| 8 | ಡಾ. ಸುನೀಲ್ ಕುಮಾರ್ ಕೈನೂರು | ಸಹಾಯಕ ಪ್ರಾಧ್ಯಾಪಕರು | ವಿಧಿ ವೈದ್ಯಶಾಸ್ತ್ರ | 25.09.2014 |
| 9 | ಡಾ. ಅರುಣ್.ಎಂ | ಸಹಾಯಕ ಪ್ರಾಧ್ಯಾಪಕರು | ವೈದ್ಯಶಾಸ್ತ್ರ ವಿಭಾಗ | 29.09.2014 |
| 10 | ಡಾ. ಮೊಹಮ್ಮದ್ ಫಯಾಜುದ್ದೀನ್ | ಸಹಾಯಕ ಪ್ರಾಧ್ಯಾಪಕರು | ಔಷಧಶಾಸ್ತ್ರ ವಿಭಾಗ | 30.09.2014 |
| 11 | ಡಾ. ರಶ್ಮಿ.ಎಂ.ಬಿ | ಸಹಾಯಕ ಪ್ರಾಧ್ಯಾಪಕರು | ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ | 07.10.2014 |
| 12 | ಡಾ. ನಂದಿನಿ ಹಡಗಲಿ | ಸಹಾಯಕ ಪ್ರಾಧ್ಯಾಪಕರು | ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ | 14.10.2014 |
| 13 | ಡಾ. ಗುರುಪ್ರಸಾದ್ ಹೊಸಮನಿ | ಸಹಾಯಕ ಪ್ರಾಧ್ಯಾಪಕರು | ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ | 29.11.2014 |
| 14 | ಡಾ. ಕಾರ್ತಿಕ್ | ಬೋಧಕರು | ಸಮುದಾಯ ಶಾಸ್ತ್ರ ವಿಭಾಗ | 01.10.2014 |
| 15 | ಡಾ.ಪರಿಣಿತ | ಬೋಧಕರು | ವಿಧಿವೈದ್ಯ ಶಾಸ್ತ್ರ | 13.10.2014 |

ಈ ಮೇಲ್ಕಂಡ ಬೋಧಕ ಸಿಬ್ಬಂದಿ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ಈಗಾಗಲೇ ಭರ್ತಿ ಮಾಡಿರುವುದರಿಂದ ಭಾರತೀಯ ವೈದ್ಯಕೀಯ ಮಂಡಳಿಯು ಸೂಚಿಸಿದ 32.7% ಸಿಬ್ಬಂದಿಯ ಕೊರತೆಯು 17% ಗೆ ಬಂದಿರುತ್ತದೆ. ಇದರಿಂದಾಗಿ ಭಾರತೀಯ ವೈದ್ಯಕೀಯ ಮಂಡಳಿಯು ಸೂಚಿಸಿರುವ ನ್ಯೂನ್ಯತೆಯನ್ನು ಸರಿಪಡಿಸಿದಂತಾಗಿದೆ.

2) **Shortage of Residents is 65.7% (i.e 69 out of 105)**

ಸಭೆಯ ತೀರ್ಮಾನ :_

ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ ರಿಮ್ಸ್ ಸಂಸ್ಥೆಗೆ ಮಂಜೂರಾಗಿ ಖಾಲಿ ಉಳಿದಿರುವ ಸ್ಥಾನಿಕರ ಹುದ್ದೆಗಳನ್ನು ಸರ್ಕಾರದ ಅನುಮೋದನೆಯ ಮೇರೆಗೆ ದಿನಾಂಕ 11.08.2014ರಂದು ನೇರ ಸಂದರ್ಶನವನ್ನು ಜರುಗಿಸಿ, ಈ ಕೆಳಕಂಡ ಸ್ಥಾನಿಕರ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲಾಗಿದೆ.

| ಕ್ರ.ಸಂ | ಬೋಧಕ ಸಿಬ್ಬಂದಿ ಹೆಸರು | ಪದನಾಮ | ವಿಭಾಗ | ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕ |
|---|---|---|---|---|
| 1 | ಡಾ. ಪ್ರಶಾಂತ ಸಿಂಗಿತಮ್ | ಹಿರಿಯ ಸ್ಥಾನಿಕರು | ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ | 23.09.2014 |
| 2 | ಡಾ. ವಿಜಯಕುಮಾರ್ | ಹಿರಿಯ ಸ್ಥಾನಿಕರು | ಶಸ್ತ್ರ ಚಿಕಿತ್ಸಾ ವಿಭಾಗ | 25.09.2014 |
| 3 | ಡಾ. ವಿಜಯೇಂದ್ರ ಕುಮಾರ್ | ಕಿರಿಯ ಸ್ಥಾನಿಕರು | ಶಸ್ತ್ರ ಚಿಕಿತ್ಸಾ ವಿಭಾಗ | 25.09.2014 |
| 4 | ಡಾ. ಹೆಚ್. ಕೆ. ಪ್ರಕಾಶ | ಹಿರಿಯ ಸ್ಥಾನಿಕರು | ಮಕ್ಕಳಶಾಸ್ತ್ರ ವಿಭಾಗ | 01.10.2014 |
| 5 | ಡಾ. ಸೀಮಾ ತೋಟದ್ | ಕಿರಿಯ ಸ್ಥಾನಿಕರು | ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ | 07.10.2014 |
| 6 | ಡಾ. ಗೊಂಡಿ ಮುರುಡಬಸವ | ಹಿರಿಯ ಸ್ಥಾನಿಕರು | ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ | 07.10.2014 |

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಈ ಮೇಲ್ಕಂಡ ಸ್ಥಾನಿಕ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ಈಗಾಗಲೇ ಭರ್ತಿ ಮಾಡಿರುವುದರಿಂದ ಭಾರತೀಯ ವೈದ್ಯಕೀಯ ಮಂಡಳಿಯು ಸೂಚಿಸಿದ 65.7% ಸ್ಥಾನಿಕ ಸಿಬ್ಬಂದಿಯ ಕೊರತೆಯು 43% ಕ್ಕೆ ಬಂದಿರುತ್ತದೆ. ಇದರಿಂದಾಗಿ ಭಾರತೀಯ ವೈದ್ಯಕೀಯ ಮಂಡಳಿಯು ಸೂಚಿಸಿರುವ ನ್ಯೂನ್ಯತೆಯನ್ನು ಸರಿಪಡಿಸಿದಂತಾಗಿದೆ.

3) **Website information is not complete. Citizens Charter & Toll free number for ragging are not displayed**

ಸಭೆಯ ತೀರ್ಮಾನ :_

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಅಂತರ್‌ಜಾಲವನ್ನು ಅಪ್‌ಡೇಟ್ ಮಾಡಲಾಗಿದ್ದು, **Citizen Charter & Toll free number** ಈ ಕೆಳಗಿನಂತೆ ಇರುತ್ತದೆ.

**Web Site :- www.rims-raichur.com**
ರ್ಯಾಗಿಂಗ್ ಟೋಲ್ ಫ್ರೀ ನಂ. 1800-180-5522
ಇಮೇಲ್ : **helpline@antiragging.in**

ಈ ಮೇಲಿನ ಮಾಹಿತಿಯನ್ನು ವೆಬ್‌ಸೈಟ್‌ನಲ್ಲಿ ಪ್ರದರ್ಶಿಸಲಾಗಿದೆ. ಇದರಿಂದಾಗಿ ಭಾರತೀಯ ವೈದ್ಯಕೀಯ ಮಂಡಳಿಯು ಸೂಚಿಸಿರುವ ನ್ಯೂನ್ಯತೆಯನ್ನು ಸರಿಪಡಿಸಿದಂತಾಗಿದೆ.

4) **Facility of E – Class is not available in lecture theaters**

ಸಭೆಯ ತೀರ್ಮಾನ :_

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಪ್ರತಿನಿತ್ಯ ನಡೆಯುವ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ತರಗತಿಗಳನ್ನು ನಡೆಸಲು ಅಂತರ್ ಜಾಲದ ಸೌಲಭ್ಯ ಕಲ್ಪಿಸಲಾಗಿರುತ್ತದೆ. ಇದರಿಂದಾಗಿ ಭಾರತೀಯ ವೈದ್ಯಕೀಯ ಮಂಡಳಿಯು ಸೂಚಿಸಿರುವ ನ್ಯೂನ್ಯತೆಯನ್ನು ಸರಿಪಡಿಸಿದಂತಾಗಿದೆ.

5) **Area of common rooms for boys & girls is only 30.sqm against requirement of 100.sq.m as per regulations.**

ಸಭೆಯ ತೀರ್ಮಾನ :_

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ 2 ವಿದ್ಯಾರ್ಥಿಗಳ ಹಾಗೂ 2 ವಿದ್ಯಾರ್ಥಿನಿಯವರ ಕಾಮನ್ ರೂಂಗಳು ಪ್ರತ್ಯೇಕವಾಗಿ ಲಭ್ಯವಿರುತ್ತವೆ. ಇದರಿಂದಾಗಿ ಭಾರತೀಯ ವೈದ್ಯಕೀಯ ಮಂಡಳಿಯು ಸೂಚಿಸಿರುವ ನ್ಯೂನ್ಯತೆಯನ್ನು ಸರಿಪಡಿಸಿದಂತಾಗಿದೆ.

| | | |
|---|---|---|
| (ಡಾ.ಕವಿತಾ ಪಾಟೀಲ್)<br>ನಿರ್ದೇಶಕರು,<br>ರಿಮ್ಸ್, ರಾಯಚೂರು<br>ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ರಿಮ್ಸ್ ಆಡಳಿತ ಮಂಡಳಿ ಸಭೆ,<br>ರಾಯಚೂರು | (ಎನ್.ಶಿವ ಶೈಲಂ) ಭಾ.ಆ.ಸೇ<br>ಸರ್ಕಾರದ ಕಾರ್ಯದರ್ಶಿಗಳು,<br>ಆಕುಕ, ವೈದ್ಯಕೀಯ ಶಿಕ್ಷಣ,<br>ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ<br>ಮಂಡಳಿ ಸಭೆ, ರಾಯಚೂರು | (ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),<br>ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ<br>ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,<br>ರಿಮ್ಸ್, ರಾಯಚೂರು |

6) **OPD in the existing hospital, only 2 examination rooms are available for the major departments against requirement of 4 examination rooms. Minor O.T is not available. Injection room is common for males & females. Plaster room & Plaster cutting room are common.**

ಸಭೆಯ ತೀರ್ಮಾನ :_

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ನೂತನ ಆಸ್ಪತ್ರೆ ಕಟ್ಟಡದಲ್ಲಿ 04 ಪರೀಕ್ಷಾ ಕೊಠಡಿಗಳು, ಮೈನರ್ ಓಟಿಸ್ ಮತ್ತು ಪುರುಷರಿಗೆ ಹಾಗೂ ಮಹಿಳೆಯರಿಗೆ ಪ್ರತ್ಯೇಕವಾಗಿ ಇಂಜಕ್ಷನ್ ಮಾಡುವ ಕೊಠಡಿಗಳು, ಅಲ್ಲದೇ ಪ್ರತ್ಯೇಕವಾಗಿ ಪ್ಲಾಸ್ಟರ್ ಕೊಠಡಿ ಹಾಗೂ ಪ್ಲಾಸ್ಟರ್ ಕಟ್ಟಿಂಗ್ ಕೊಠಡಿಗಳು, ಸ್ಪಿಚ್‌ಥೆರಫಿ ಕೊಠಡಿಗಳು, ಸಹ ಲಭ್ಯವಿರುತ್ತವೆ. ಇದರಿಂದಾಗಿ ಭಾರತೀಯ ವೈದ್ಯಕೀಯ ಮಂಡಳಿಯು ಸೂಚಿಸಿರುವ ನ್ಯೂನ್ಯತೆಯನ್ನು ಸರಿಪಡಿಸಿದಂತಾಗಿದೆ.

7) **Speech therapy is not available. Portable audiometry cabin is available but no Audiometry is done.**

ಸಭೆಯ ತೀರ್ಮಾನ :_

ಅಡಿಯೋಮೆಟ್ರಿ ಉಪಕರಣವನ್ನು ಖರೀದಿಸುವ ಟೆಂಡರ್ ಪ್ರಕ್ರಿಯೆ ಜಾರಿಯಲ್ಲಿರುತ್ತದೆ. ಹಾಗೂ ಅಡಿಯೋಲಜಿಸ್ಟ್ / ಸ್ಪೀಚ್ ಥೆರಪಿಸ್ಟ್ ಹುದ್ದೆಯ ನೇಮಕಾತಿ ಪ್ರಕ್ರಿಯೆಯು ಸಹ ಜಾರಿಯಲ್ಲಿರುತ್ತದೆ. ಇದರಿಂದಾಗಿ ಭಾರತೀಯ ವೈದ್ಯಕೀಯ ಮಂಡಳಿಯು ಸೂಚಿಸಿರುವ ನ್ಯೂನ್ಯತೆಯನ್ನು ಸರಿಪಡಿಸಿದಂತಾಗಿದೆ.

8) **Refraction room, dark room & dressing room are in the same room.**

ಸಭೆಯ ತೀರ್ಮಾನ :_

ನೂತನ ಆಸ್ಪತ್ರೆ ಕಟ್ಟಡದಲ್ಲಿ ರಿಫ್ರಾಕ್ಷನ್ ಕೊಠಡಿ, ಡಾರ್ಕ ರೂಂ ಮತ್ತು ಡ್ರಸ್ಸಿಂಗ್ ರೂಂ ಪ್ರತ್ಯೇಕವಾಗಿ ಲಭ್ಯವಿರುತ್ತವೆ. ಇದರಿಂದಾಗಿ ಭಾರತೀಯ ವೈದ್ಯಕೀಯ ಮಂಡಳಿಯು ಸೂಚಿಸಿರುವ ನ್ಯೂನ್ಯತೆಯನ್ನು ಸರಿಪಡಿಸಿದಂತಾಗಿದೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

9) **Child welfare clinic & sterility clinic are not available**

ಸಭೆಯ ತೀರ್ಮಾನ :_

ರಿಮ್ಸ್ ನೂತನ ಬೋಧಕ ಆಸ್ಪತ್ರೆಯ ಮಕ್ಕಳ ವಿಭಾಗದಲ್ಲಿ ಮಕ್ಕಳ ಸುರಕ್ಷತೆಗೆ ಸಂಬಂಧಿಸಿದಂತೆ, ಕ್ಲಿನಿಕ್ ಹಾಗೂ ಸ್ಟರಿಲಿಟಿ ಕ್ಲಿನಿಕ್ ಕೊಠಡಿಗಳು ಲಭ್ಯವಿರುತ್ತವೆ. ಇದರಿಂದಾಗಿ ಭಾರತೀಯ ವೈದ್ಯಕೀಯ ಮಂಡಳಿಯು ಸೂಚಿಸಿರುವ ನ್ಯೂನ್ಯತೆಯನ್ನು ಸರಿಪಡಿಸಿದಂತಾಗಿದೆ.

10) **Teaching beds : There are only 343 beds against requirement of 500 as per regulation as under**

ಸಭೆಯ ತೀರ್ಮಾನ :_

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ 520 ಹಾಸಿಗೆಗಳ ಸುಸಜ್ಜಿತ ಆಸ್ಪತ್ರೆಯನ್ನು ನಿರ್ಮಾಣ ಮಾಡಲಾಗಿದ್ದು, ಭಾರತೀಯ ವೈದ್ಯಕೀಯ ಮಂಡಳಿ ನಿಯಮದಂತೆ 500 ಹಾಸಿಗೆಗಳು ರಿಮ್ಸ್ ನೂತನ ಬೋಧಕ ಆಸ್ಪತ್ರೆಯಲ್ಲಿ ಲಭ್ಯವಿರುತ್ತವೆ. ಇದರಿಂದಾಗಿ ಭಾರತೀಯ ವೈದ್ಯಕೀಯ ಮಂಡಳಿಯು ಸೂಚಿಸಿರುವ ನ್ಯೂನ್ಯತೆಯನ್ನು ಸರಿಪಡಿಸಿದಂತಾಗಿದೆ.

11) **Avarage Histopathology workload is only 5. Avarage cytopathological workload is only 5. Both these are inadequate.**

ಸಭೆಯ ತೀರ್ಮಾನ :_

ರಿಮ್ಸ್ ಆವರಣದಲ್ಲಿರುವ ನೂತನ ಬೋಧಕ ಆಸ್ಪತ್ರೆಯ ಉದ್ಘಾಟನೆಯ ನಂತರ ಹಿಸ್ಟೋಪ್ಯಾಥಲಜಿ ಮತ್ತು ಸೈಟೋ ಪ್ಯಾಥಲಜಿಯ ಸರಾಸರಿ ಸಂಖ್ಯೆ 8 ರಿಂದ 10ಕ್ಕೇರಿದೆ. ಇದರಿಂದಾಗಿ ಭಾರತೀಯ ವೈದ್ಯಕೀಯ ಮಂಡಳಿಯು ಸೂಚಿಸಿರುವ ನ್ಯೂನ್ಯತೆಯನ್ನು ಸರಿಪಡಿಸಿದಂತಾಗಿದೆ.

12) **Casualty: Thre are only 7 beds against requirement of 20 as per Regulations. Separate casualty for O.T. is not available. There is emergency O.T.**

ಸಭೆಯ ತೀರ್ಮಾನ :_

ರಿಮ್ಸ್ ನೂತನ ಬೋಧಕ ಆಸ್ಪತ್ರೆಯ ತುರ್ತು ಚಿಕಿತ್ಸಾ ಘಟಕದಲ್ಲಿ 10 ಮಹಿಳಾ ಮತ್ತು 10 ಪುರುಷರ ಪ್ರತ್ಯೇಕ ತುರ್ತು ಚಿಕಿತ್ಸಾ ವಾರ್ಡ್‌ಗಳು ಲಭ್ಯವಿರುತ್ತವೆ. ಅದೇ ರೀತಿ ತುರ್ತು ಚಿಕಿತ್ಸಾ ಘಟಕದಲ್ಲಿ ಓ.ಟಿ ಸಹ ಲಭ್ಯವಿರುತ್ತದೆ. ಇದರಿಂದಾಗಿ ಭಾರತೀಯ ವೈದ್ಯಕೀಯ ಮಂಡಳಿಯು ಸೂಚಿಸಿರುವ ನ್ಯೂನ್ಯತೆಯನ್ನು ಸರಿಪಡಿಸಿದಂತಾಗಿದೆ.

| | | |
|---|---|---|
| (ಡಾ.ಕವಿತಾ ಪಾಟೀಲ್)<br>ನಿರ್ದೇಶಕರು,<br>ರಿಮ್ಸ್, ರಾಯಚೂರು<br>ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ರಿಮ್ಸ್ ಆಡಳಿತ ಮಂಡಳಿ ಸಭೆ,<br>ರಾಯಚೂರು | (ಎನ್.ಶಿವ ಶೈಲಂ) ಭಾ.ಆ.ಸೇ<br>ಸರ್ಕಾರದ ಕಾರ್ಯದರ್ಶಿಗಳು,<br>ಆಕುಕ, ವೈದ್ಯಕೀಯ ಶಿಕ್ಷಣ,<br>ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ<br>ಮಂಡಳಿ ಸಭೆ, ರಾಯಚೂರು | (ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),<br>ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ<br>ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,<br>ರಿಮ್ಸ್, ರಾಯಚೂರು |

13) **O.T: There are only 6 O.T.s against requirement of 7 major O.T.s ENT OT is shared with surgery.**

ಸಭೆಯ ತೀರ್ಮಾನ :_

ರಿಮ್ಸ್ ನೂತನ ಬೋಧಕ ಆಸ್ಪತ್ರೆಯಲ್ಲಿ ವಿಭಾಗವಾರು 10 ಮೇಜರ್ ಓ.ಟಿ ಮತ್ತು 02 ಸೆಪ್ಟಿಕ್ ಓ.ಟಿ ಗಳು ಲಭ್ಯವಿರುತ್ತವೆ. ಇದರಿಂದಾಗಿ ಭಾರತೀಯ ವೈದ್ಯಕೀಯ ಮಂಡಳಿಯು ಸೂಚಿಸಿರುವ ನ್ಯೂನ್ಯತೆಯನ್ನು ಸರಿಪಡಿಸಿದಂತಾಗಿದೆ.

14) **AERB approval is not available. There are 5 portable X-ray machines against requirement of 3 as per Regulations.**

ಸಭೆಯ ತೀರ್ಮಾನ :_

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಎ.ಇ.ಆರ್.ಬಿ ಯ ಖಾಯಂ ನೊಂದಣಿಯನ್ನು ಮಾಡಿಸಲಾಗಿದೆ. 04 ಪೋರ್ಟಬಲ್ ಮತ್ತು 04 ಎಕ್ಸ್‌ರೇ ಉಪಕರಣಗಳು ಹಾಗೂ 1 ಯು.ಎಸ್.ಜಿ ಉಪಕರಣವು ಸಹ ರಿಮ್ಸ್ ನೂತನ ಬೋಧಕ ಆಸ್ಪತ್ರೆಯಲ್ಲಿ ಲಭ್ಯವಿರುತ್ತವೆ. ಇದರಿಂದಾಗಿ ಭಾರತೀಯ ವೈದ್ಯಕೀಯ ಮಂಡಳಿಯು ಸೂಚಿಸಿರುವ ನ್ಯೂನ್ಯತೆಯನ್ನು ಸರಿಪಡಿಸಿದಂತಾಗಿದೆ.

15) **Other deficiencies as pointed out in the assessment report.**

ಸಭೆಯ ತೀರ್ಮಾನ :_

ರಿಮ್ಸ್ ನೂತನ ಬೋಧಕ ಆಸ್ಪತ್ರೆಯಲ್ಲಿರುವ ಎಲ್ಲಾ ಸಣ್ಣಪುಟ್ಟ ನ್ಯೂನ್ಯತೆಗಳನ್ನು ಪರಿಶೀಲಿಸಿ, ಸರಿಪಡಿಸಲಾಗಿದೆ.

ಕಾರ್ಯದರ್ಶಿಗಳು, ಭಾರತೀಯ ವೈದ್ಯಕೀಯ ಮಂಡಳಿ, ನವದೆಹಲಿ ಇವರು ಸೂಚಿಸಿರುವ ಎಲ್ಲಾ ನ್ಯೂನ್ಯತೆಯನ್ನು ನಿವಾರಿಸಲು ಮೇಲ್ಕಂಡ ಅಂಶಗಳಿಗೆ ಎಲ್ಲಾ ಕ್ರಮಗಳನ್ನು ಅನುಸರಿಸಲಾಗಿದೆ.

| | |
|---|---|
| ವಿಷಯ ಸೂಚಿ ಸಂಖ್ಯೆ. 02 | ದಿನಾಂಕ 04.12.2014ರಂದು ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಇಲಾಖಾ ಪದೋನ್ನತಿ ಸಮಿತಿ ಸಭೆಯ ಸಭಾ ನಡವಳಿಗಳನ್ನು ಅನುಮೋದಿಸುವ ಬಗ್ಗೆ. |

ದಿನಾಂಕ 04.12.2014 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಬೆಂಗಳೂರು ಇವರ ಕಛೇರಿಯಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಇಲಾಖಾ ಪದೋನ್ನತಿ ಸಭೆಯ ಸಭಾ ನಡುವಳಿಗಳನ್ನು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಸ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

| ಕ್ರ.ಸಂ. | ಹೆಸರು | ವಿಭಾಗ | ಪದೋನ್ನತಿ ನೀಡಿರುವ ಹುದ್ದೆ | ಷರಾ |
|---|---|---|---|---|
| 01 | ಡಾ. ವಸಂತ್ ಚವ್ಹಾಣ್ | ಔಷಧಶಾಸ್ತ್ರ | ಪ್ರಾಧ್ಯಾಪಕರು | ದಿನಾಂಕ : 04.12.2014 ರಂದು ಜರುಗಿದ ಇಲಾಖಾ ಪದೋನ್ನತಿ ಸಮಿತಿ ಸಭೆಯ ನಡುವಳಿಗಳು |
| 02 | ಡಾ. ಮೊಹ್ಮದ್ ಅರ್ಶದ್ | ಔಷಧಶಾಸ್ತ್ರ | ಸಹ ಪ್ರಾಧ್ಯಾಪಕರು | |
| 03 | ಡಾ. ಮಹೇಶ್‌ಕುಮಾರ್ | ರೋಗನಿರ್ಧಾರಕ ಶಾಸ್ತ್ರ | ಸಹ ಪ್ರಾಧ್ಯಾಪಕರು | |
| 04 | ಡಾ. ಶಂಕರ್‌ಗೌಡ ಐ.ರೆಡ್ಡಿ | ಚರ್ಮ ಮತ್ತು ಲೈಂಗಿಕ ವಿಭಾಗ | ಪ್ರಾಧ್ಯಾಪಕರು | |
| 05 | ಡಾ. ರಮೇಶ್ | ಶಸ್ತ್ರಚಿಕಿತ್ಸಾ ವಿಭಾಗ | ಸಹಾಯಕ ಪ್ರಾಧ್ಯಾಪಕರು (**Redesignation**) | |
| 06 | ಡಾ. ನಂದನ್ ಪಡಶಟ್ಟಿ | ಅರವಳಿಕೆ ವಿಭಾಗ | ಪ್ರಾಧ್ಯಾಪಕರು | |
| 07 | ಡಾ. ತಿರುಮಲರಾವ್ | ದಂತಚಿಕಿತ್ಸಾ ವಿಭಾಗ | ಸಹ ಪ್ರಾಧ್ಯಾಪಕರು | |

ಸಭೆಯ ತೀರ್ಮಾನ :-

ದಿನಾಂಕ 04.12.2014 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವೈದ್ಯಕೀಯ ಶಿಕ್ಷಣ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಇಲಾಖಾ ಪದೋನ್ನತಿ ಸಭೆಯ ಸಭಾ ನಡುವಳಿಗಳನ್ನು ಪರಿಶೀಲಿಸಿ ಅನುಮೋದಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 03 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಖಾಲಿ ಇರುವ ಬೋಧಕ ಸಿಬ್ಬಂದಿ ಹಾಗೂ ತುರ್ತು ಚಿಕಿತ್ಸಾ ಘಟಕದ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡುವ ಬಗ್ಗೆ. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರಿನಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯು 2014-15ನೇ ಸಾಲಿನಲ್ಲಿ ರಿಮ್ಸ್ ಸಂಸ್ಥೆಗೆ ಭೇಟಿ ನೀಡಿ ತಪಾಸಣೆಯನ್ನು ನಡೆಸಿ, ಹಲವು ನ್ಯೂನತೆಗಳನ್ನು ತೋರಿಸಲಾಗಿರುತ್ತದೆ. ಈ ಸಂಸ್ಥೆಯಲ್ಲಿ ಹಾಲಿ ಖಾಲಿ ಇರುವ ಬೋಧಕ ಸಿಬ್ಬಂದಿಗಳ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಂಡಿದ್ದರು ಸಹ ಕೆಲವು ವಿಭಾಗಗಳ ಅವಶ್ಯ ಹುದ್ದೆಗಳು ಭರ್ತಿಯಾಗಿರುವುದಿಲ್ಲ. ಭಾರತೀಯ ವೈದ್ಯಕೀಯ ಮಂಡಳಿಯು ಸೂಚಿಸಿರುವ ನ್ಯೂನತೆಗಳನ್ನು ಪರಿಶೀಲಿಸಲು ಯಾವುದೇ ಸಮಯದಲ್ಲಿ ಪುನಃ ಈ ಸಂಸ್ಥೆಗೆ ಭೇಟಿ ನೀಡುವ ಸಾಧ್ಯತೆಯಿರುವುದರಿಂದ ಖಾಲಿ ಇರುವ ವಿವಿಧ ಬೋಧಕ ಹಾಗೂ ಬೋಧಕೇತರ ವೃಂದದ ಹುದ್ದೆಗಳನ್ನು ಭರ್ತಿಮಾಡುವುದು ಅವಶ್ಯಕವಾಗಿರುತ್ತದೆ.

ಕಾರಣ ರಿಮ್ಸ್ ಸಂಸ್ಥೆಯಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳನ್ನು ನಿಯಮಾನುಸಾರ ಪತ್ರಿಕಾ ಪ್ರಕಟಣೆ ಮಾಡಿ, ನೇಮಕಾತಿ ಮಾಡಿಕೊಳ್ಳಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಸ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

| ಸರ್ಕಾರದಿಂದ ಮಂಜೂರಾದ ಹುದ್ದೆಗಳ ವಿವರ ಈ ಕೆಳಗಿನಂತಿದೆ. | | | | |
|---|---|---|---|---|
| ಕ್ರಮ ಸಂಖ್ಯೆ | ಹುದ್ದೆ | ಮಂಜೂರಾದ ಹುದ್ದೆಗಳ ವಿವರ | ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳ ವಿವರ | ಖಾಲಿ ಇರುವ ಹುದ್ದೆಗಳ ವಿವರ |
| 01 | ಪ್ರಾಧ್ಯಾಪಕರು | 21 | 15 | 6 |
| 02 | ಸಹ ಪ್ರಾಧ್ಯಾಪಕರು | 31 | 26 | 5 |
| 03 | ಸಹಾಯಕ ಪ್ರಾಧ್ಯಾಪಕರು | 43 | 36 | 7 |
| 04 | ಬೋಧಕರು | 34 | 25 | 9 |
| 05 | ಹಿರಿಯ ಸ್ಥಾನಿಕರು | 46 | 25 | 0 |
| 06 | ಕಿರಿಯ ಸ್ಥಾನಿಕರು | 58 | 18 | 40 |
| 07 | ಸಿ.ಎಂ.ಓ | 10 | 04 | 06 |
| | ಒಟ್ಟು | 243 | 149 | 73 |

ಸಭೆಯ ತೀರ್ಮಾನ :-

ಸರ್ಕಾರದ ಆದೇಶ ಸಂಖ್ಯೆ. ಆಕುಕ / 266 / ಎಂಪಿಎಸ್ / 2006 ದಿನಾಂಕ 12.09.2006 ಮತ್ತು ಸರ್ಕಾರದ ಆದೇಶ ಸಂಖ್ಯೆ. ಆಕುಕ / ಎಂಎಂಇ / 2012 ದಿನಾಂಕ 16.08.2014ರನ್ವಯ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 233 ಬೋಧಕ ಹುದ್ದೆಗಳು ಹಾಗೂ ಆರ್ಥಿಕ ಸಮಿತಿ ಸಭೆಯ ಅನುಮೋದನೆ ಮೇರೆಗೆ 10 ತುರ್ತು ಚಿಕಿತ್ಸಾ ಘಟಕದ ವೈದ್ಯಾಧಿಕಾರಿಗಳ ಹುದ್ದೆಗಳು ಸೇರಿ ಒಟ್ಟು 243 ಬೋಧಕ ಸಿಬ್ಬಂದಿ ಹುದ್ದೆಗಳಲ್ಲಿ 149 ಬೋಧಕ ಸಿಬ್ಬಂದಿ ಹುದ್ದೆಗಳು ಭರ್ತಿಯಾಗಿದ್ದು, ಇನ್ನು 73 ಹುದ್ದೆಗಳು ಖಾಲಿ ಉಳಿದಿರುವುದನ್ನು ಆಡಳಿತ ಮಂಡಳಿಯ ಪರಿಶೀಲಿಸಿ, ಖಾಲಿ ಇರುವ ಹುದ್ದೆಗಳಿಗೆ ನೇರ ಸಂದರ್ಶನದ ಮುಖಾಂತರ ಭರ್ತಿ ಮಾಡಲು ಪತ್ರಿಕಾ ಪ್ರಕಟಣೆ (ಪತ್ರಿಕಾ ಪ್ರಕಟಣೆಯೊಂದಿಗೆ ಸಂಸ್ಥೆಯ ಅಂತರ್ಜಾಲ ಹಾಗೂ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಅಂತರ್‌ಜಾಲದಲ್ಲಿ ಸಹ ಪ್ರಕಟಿಸುವುದು) ಮಾಡಿ ಅಗತ್ಯ ಕ್ರಮ ಕೈಗೊಳ್ಳಲು ಆಡಳಿತ ಮಂಡಳಿಯು ಅನುಮೋದನೆ ನೀಡಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 04 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಿಂದ ಇತರ ಸ್ವಾಯತ್ತ ಸಂಸ್ಥೆಗಳಿಗೆ ವರ್ಗಾವಣೆಯಾಗಿರುವ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳ ಪಟ್ಟಿಗೆ ಘಟನೋತ್ತರ ಅನುಮೋದನೆ ನೀಡುವ ಬಗ್ಗೆ. |

ದಿನಾಂಕ 27.10.2014ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 21 ನೇ ಆಡಳಿತ ಮಂಡಳಿ ಸಭೆಯಲ್ಲಿ ಈ ಕೆಳಕಂಡ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಯನ್ನು ವರ್ಗಾವಣೆಗೊಳಿಸುವಂತೆ ಅನುಮತಿಯನ್ನು ನೀಡಲಾಗಿರುತ್ತದೆ. ಆಡಳಿತ ಮಂಡಳಿಯ ನಿರ್ಧಾರದಂತೆ ಈ ಕೆಳಕಂಡ ಸಿಬ್ಬಂದಿಗಳನ್ನು ಈ ಸಂಸ್ಥೆಯಿಂದ ಬಿಡುಗಡೆಗೊಳಿಸಲಾಗಿದ್ದು, ಬಿಡುಗಡೆಗೊಳಿಸಲಾಗಿರುವ ಸಿಬ್ಬಂದಿಗಳ ಪಟ್ಟಿಗೆ ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಿ ಸಲ್ಲಿಸಿದೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

| ಕ್ರ.ಸಂ | ವರ್ಗಾವಣೆ ಕೋರಿರುವ ಸಿಬ್ಬಂದಿಗಳು | ವರ್ಗಾವಣೆಗೊಳಿಸಿದ ಸಂಸ್ಥೆ |
|---|---|---|
| 1 | ಡಾ. ರಮೇಶ್, ಸಹಾಯಕ ಪ್ರಾಧ್ಯಾಪಕರು, ಜೀವರಸಾಯನ ಶಾಸ್ತ್ರ ವಿಭಾಗ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು | ವಿಜಯನಗರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬಳ್ಳಾರಿ |
| 2 | ಶ್ರೀ ಬಸವರಾಜ್. ಹೆಚ್, ಶುಶ್ರೂಷಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು. | ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹುಬ್ಬಳ್ಳಿ |
| 3 | ಶ್ರೀ ಮೊಹಮ್ಮದ್ ರಫಿ ದಾದುಸಾಬ್, ಶುಶ್ರೂಷಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು. | ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗ |
| 4 | ಕು. ಕುಸುಮ. ಎಂ, ಶುಶ್ರೂಷಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು. | ಶಿವಮೊಗ್ಗ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಶಿವಮೊಗ್ಗ |

ಸಭೆಯ ತೀರ್ಮಾನ :-

ದಿನಾಂಕ 27.10.2014ರಂದು ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಜರುಗಿದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 21 ನೇ ಆಡಳಿತ ಮಂಡಳಿ ಸಭೆಯ ನಿರ್ಣಯದಂತೆ 01 ಬೋಧಕ ಹಾಗೂ 03 ಬೋಧಕೇತರ ಸಿಬ್ಬಂದಿಗಳನ್ನು ರಿಮ್ಸ್ ಸಂಸ್ಥೆಯಿಂದ ವರ್ಗಾವಣೆ ಮಾಡಲಾಗಿರುವ ಕ್ರಮವನ್ನು ಪರಿಶೀಲಿಸಿ, ಆಡಳಿತ ಮಂಡಳಿಯು ಅನುಮೋದನೆ ನೀಡಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 05 | ಡಾ. ರಾಮಯ್ಯ, ನಿರ್ದೇಶಕರು, ಬೆಳಗಾಂ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಳಗಾಂ ಇವರು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರಾಗಿ ಸಲ್ಲಿಸಿದ ಸೇವಾವಧಿಗೆ ಪೆನ್ಷನ್ ಕಾಂಟ್ರಿಬ್ಯೂಷನ್ ಪಾವತಿಸುವ ಬಗ್ಗೆ. |

ಸರ್ಕಾರದ ಆದೇಶ ಸಂಖ್ಯೆ. ಆಕುಕ / 104 / ಎಂಎಂಇ / 2013 ದಿನಾಂಕ 25.11.2014ರಲ್ಲಿ ಡಾ. ರಾಮಯ್ಯ, ನಿರ್ದೇಶಕರು, ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಳಗಾವಿ ಇವರು ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ನಿರ್ದೇಶಕರಾಗಿ ದಿನಾಂಕ 13.08.2008 ರಿಂದ ದಿನಾಂಕ 03.07.2012ರವರೆಗೆ ಕಾರ್ಯನಿರ್ವಹಿಸಿದ್ದು, ಅವರು ಸೇವೆ ಸಲ್ಲಿಸಿದ ಅವಧಿಗೆ ಪೆನ್ಷನ್ ಕಾಂಟ್ರಿಬ್ಯೂಷನ್ 1/8 ರಂತೆ ಒಟ್ಟು ರೂ. 1,76,912/- ಮತ್ತು ಲೀವ್ ಸ್ಯಾಲರಿ ಶೇ. 11 ರಷ್ಟು ರೂ. 1,55,681/-ಗಳು ಸೇರಿ ಒಟ್ಟು ಮೊತ್ತ ರೂ. 3,32,593/- ಗಳನ್ನು ಸಂಸ್ಥೆಗೆ ಬಿಡುಗಡೆಯಾಗಿರುವ ಅನುದಾನದಿಂದಲೇ ಭರಿಸುವಂತೆ ಸೂಚಿಸಲಾಗಿದೆ.

ಕಾರಣ ಡಾ. ರಾಮಯ್ಯ, ನಿರ್ದೇಶಕರು, ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಬೆಳಗಾವಿ ಇವರ ಪೆನ್ಷನ್ ಕಾಂಟ್ರಿಬ್ಯೂಷನ್ 1/8 ರಂತೆ ಒಟ್ಟು ರೂ. 1,76,912/- ಮತ್ತು ಲೀವ್ ಸ್ಯಾಲರಿ ಶೇ. 11 ರಷ್ಟು ರೂ. 1,55,681/-ಗಳು ಸೇರಿ ಒಟ್ಟು ಮೊತ್ತ ರೂ. 3,32,593/- ಗಳನ್ನು ಸಂಸ್ಥೆಗೆ ಬಿಡುಗಡೆಯಾಗಿರುವ ಅನುದಾನದಿಂದ ಪಾವತಿಸುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

(ಡಾ. ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಸಭೆಯ ತೀರ್ಮಾನ :-

ಡಾ. ರಾಮಯ್ಯ, ಹಿಂದಿನ ನಿರ್ದೇಶಕರು, ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು ಇವರು ದಿನಾಂಕ 13.08.2008 ರಿಂದ ದಿನಾಂಕ 03.07.2012ರವರೆಗೆ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದ್ದು, ಅವರು ಸೇವೆ ಸಲ್ಲಿಸಿದ ಅವಧಿಗೆ ಪೆನ್ಷನ್ ಕಾಂಟ್ರಿಬ್ಯೂಷನ್ 1/8 ರಂತೆ ಒಟ್ಟು ರೂ. 1,76,912/- ಮತ್ತು ಲೀವ್ ಸ್ಯಾಲರಿ ಶೇ. 11 ರಷ್ಟು ರೂ. 1,55,681/-ಗಳು ಸೇರಿ ಒಟ್ಟು ಮೊತ್ತ ರೂ. 3,32,593/- ಗಳನ್ನು ಸಂಸ್ಥೆಯೇ ಪಾವತಿಸಬೇಕಾಗಿರುವುದರಿಂದ, ಸಂಸ್ಥೆಗೆ ಸರ್ಕಾರದಿಂದ ಬಿಡುಗಡೆಯಾಗಿರುವ ಅನುದಾನದಿಂದಲೇ ಭರಿಸುವಂತೆ ಆಡಳಿತ ಮಂಡಳಿಯು ಪರಿಶೀಲಿಸಿ, ಅನುಮೋದನೆ ನೀಡಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 06 | ರಿಮ್ಸ್ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ಖಾಯಂಪೂರ್ವ ಸೇವಾವಧಿಯನ್ನು ಘೋಷಿಸಲಾಗಿದ್ದು, ಖಾಯಂಪೂರ್ವ ಸೇವಾವಧಿ ಘೋಷಿಸಿರುವ ಸಿಬ್ಬಂದಿಗಳ ಪಟ್ಟಿಯನ್ನು ಅನುಮೋದಿಸುವ ಕುರಿತು. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ಖಾಯಂಪೂರ್ವ ಸೇವಾವಧಿಯನ್ನು ಸರ್ಕಾರದ ಆದೇಶ ಸಂಖ್ಯೆ ಆಕುಕ / 86 / ಎಂಎಂಇ / 2013 ದಿನಾಂಕ 10.04.2014ರನ್ವಯ ಘೋಷಿಸಲಾಗಿದ್ದು, ಖಾಯಂಪೂರ್ವ ಸೇವಾವಧಿಯನ್ನು ಘೋಷಿಸಲಾಗಿರುವ ವಿವಿಧ ಬೋಧಕ ಸಿಬ್ಬಂದಿಗಳ ಪಟ್ಟಿಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

| ಕ್ರ.ಸಂ | ಹೆಸರು | ಕರ್ತವ್ಯಕ್ಕೆ ವರದಿ ಮಾಡಿಕೊಂಡ ದಿನಾಂಕ | ಪದನಾಮ | ವಿಭಾಗ | ಖಾಯಂ ಪೂರ್ವ ಸೇವಾವಧಿ ಪೂರ್ಣಗೊಂಡ ದಿನಾಂಕ |
|---|---|---|---|---|---|
| 1 | ಡಾ. ಪ್ರತಿಭಾ | 05.09.2011 | ವೈದ್ಯಾಧಿಕಾರಿಗಳು | ತುರ್ತು ಚಿಕಿತ್ಸಾ ಘಟಕ | 04.09.2013 |
| 2 | ಡಾ. ಅಶೋಕ್ | 19.10.2010 | ವೈದ್ಯಾಧಿಕಾರಿಗಳು | ತುರ್ತು ಚಿಕಿತ್ಸಾ ಘಟಕ | 20.07.2014 |
| 3 | ಡಾ. ಅನಿಲ್ ಗುಮಾಸ್ತೆ | 29.04.2009 | ಸಹಾಯಕ ಪ್ರಾಧ್ಯಾಪಕರು, | ಮನೋವೈದ್ಯ ವಿಭಾಗ | 20.07.2014 |
| 4 | ಡಾ. ಕನಕ ಚಲಪತಿ | 12.09.2011 | ಹಿರಿಯ ಸ್ಥಾನಿಕರು | ಎಲುಬು ಮತ್ತು ಕೀಲು ವಿಭಾಗ | 20.07.2014 |

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಸಭೆಯ ತೀರ್ಮಾನ :-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ವಿವಿಧ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳ ಖಾಯಂಪೂರ್ವ ಸೇವಾವಧಿಯನ್ನು ಸರ್ಕಾರದ ಆದೇಶ ಸಂಖ್ಯೆ ಆಕುಕ / 86 / ಎಂಎಂಇ / 2013 ದಿನಾಂಕ 10.04.2014ರನ್ವಯ ಘೋಷಿಸಲಾಗಿದ್ದು, ಖಾಯಂಪೂರ್ವ ಸೇವಾವಧಿಯನ್ನು ಘೋಷಿಸಲಾಗಿರುವ 04 ಬೋಧಕ ಸಿಬ್ಬಂದಿಗಳ ಪಟ್ಟಿಗೆ ಆಡಳಿತ ಮಂಡಳಿಯು ಅನುಮೋದನೆ ನೀಡಿತು.

ವಿಷಯ ಸೂಚಿ ಸಂಖ್ಯೆ :07 ರೇಡಿಯಾಲಜಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ವೇತನವನ್ನು ಹೆಚ್ಚಿಸುವ ಬಗ್ಗೆ.

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ರೇಡಿಯಾಲಜಿ ವಿಭಾಗದಲ್ಲಿ ಖಾಲಿ ಇರುವ ಪ್ರಾಧ್ಯಾಪಕರು, ಸಹ ಪ್ರಾಧ್ಯಾಪಕರು ಹಾಗು ಸಹಾಯಕ ಪ್ರಾಧ್ಯಾಪಕರ ಹುದ್ದೆಗಳನ್ನು ಭರ್ತಿ ಮಾಡಲು ಹಲವಾರು ಬಾರಿ ಪತ್ರಿಕಾ ಪ್ರಕಟಣೆ ಮಾಡಿದರೂ ಸಹ ಸೂಕ್ತ ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗಿರುವುದಿಲ್ಲ. ರೇಡಿಯಾಲಜಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಹಾಗು ಖಾಲಿ ಇರುವ ಹುದ್ದೆಗಳ ವಿವರ ಈ ಕೆಳಗಿನಂತಿದೆ.

| ಕ್ರ. ಸಂ | ಹುದ್ದೆ | Sanction | Working | Vacant | ಷರಾ |
|---|---|---|---|---|---|
| 1 | ಪ್ರಾಧ್ಯಾಪಕರು | 01 | - | 01 | |
| 2 | ಸಹ ಪ್ರಾಧ್ಯಾಪಕರು | 01 | 01 | - | ಡಾ. ಗುರುಶಾಂತಪ್ಪ. ಜಿ. ನಂದೂರ್‌ಕರ್‌ಇವರು ಸಂಚಿತ ವೇತನದಲ್ಲಿ ಕಾರ್ಯನಿರ್ವಹಿಸುತ್ತಿದ್ದಾರೆ. |
| 3 | ಸಹಾಯಕ ಪ್ರಾಧ್ಯಾಪಕರು | 01 | - | 01 | |
| 4 | ಹಿರಿಯ ಸ್ಥಾನಿಕರು | 05 | 02 | 03 | |

ರೇಡಿಯಾಲಜಿ ವಿಭಾಗದಲ್ಲಿ ಬೋಧಕ ವರ್ಗದ ಹುದ್ದೆಗಳು ಖಾಲಿ ಇರುವುದರಿಂದ ಹಾಗು ಅನೇಕ ಬಾರಿ ಸಂದರ್ಶನ ನಡೆಸಿದರೂ ಅರ್ಹ ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಗದೇ ಇರುವ ಕಾರಣ ಭಾರತೀಯ ವೈದ್ಯಕೀಯ ಮಂಡಳಿಯ ಅನುಮೋದನೆಯನ್ನು ಪಡೆಯಲು ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ರೋಗಿಗಳಿಗೆ ಚಿಕಿತ್ಸೆ ನೀಡಲು ತೊಂದರೆಯಾಗದಂತೆ ಎಂ.ಸಿ.ಐ ನಿಯಮಾವಳಿ ಪ್ರಕಾರ ಬೋಧಕ ಸಿಬ್ಬಂದಿಯ ಸೇವೆಯನ್ನು 65 ವರ್ಷಗಳವರೆಗೆ ನೇಮಕಾತಿ ಮಾಡಿಕೊಳ್ಳಲು ಅವಕಾಶ ಕಲ್ಪಿಸಿರುವುದರಿಂದ ಈಗಾಗಲೇ ಅರ್ಹ ವಿದ್ಯಾರ್ಹತೆಯನ್ನು ಹೊಂದಿ ನಿವೃತ್ತಿ ಹೊಂದಿದ ಡಾ. ಗುರುಶಾಂತಪ್ಪ. ಜಿ. ನಂದೂರ್‌ಕರ್ ಇವರನ್ನು ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ದಿನಾಂಕ 01.10.2006 ರಿಂದ ನೇಮಕಾತಿ ಮಾಡಿದ್ದು, ದಿನಾಂಕ 05.01.2011 ರಿಂದ ಸಹ ಪ್ರಾಧ್ಯಾಪಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ರೇಡಿಯಾಲಜಿ ವಿಭಾಗದಲ್ಲಿ ಪದವಿ ಪಡೆದ ತಜ್ಞ ವೈದ್ಯರು ದೊರೆಯುವುದು ತುಂಬಾ ವಿರಳವಾಗಿರುವುದರಿಂದ, ಎಂ.ಸಿ.ಐ ಮಾನ್ಯತೆಗೆ ತಜ್ಞ ವೈದ್ಯರ ಅವಶ್ಯಕತೆಯಿರುವುದರಿಂದ ಹಾಗು ರೋಗಿಗಳ ಚಿಕಿತ್ಸೆಗೆ ಸದರಿ ವೈದ್ಯರ ಸೇವೆಯು ಅತಿ ಅವಶ್ಯವಾಗಿರುವುದರಿಂದ ದಿನಾಂಕ 31.10.2012ರಂದು ಸಂಸ್ಥೆಯ ಆಡಳಿತ ಸಮಿತಿ ಸಭೆಯನ್ನು ಜರುಗಿಸಿ ಸಭೆಯ ನಡುವಳಿಗಳನ್ವಯ ಸದ್ಯ ನೀಡಲಾಗುತ್ತಿರುವ ರೂ. 65,000/-ಗಳ ಸಂಚಿತ ವೇತನದೊಂದಿಗೆ ರೂ. 30,000/-ನ್ನು ಬಳಕೆದಾರರ ನಿಧಿಯಿಂದ **(User Charges)** ಹೆಚ್ಚುವರಿಯಾಗಿ ದಿನಾಂಕ 01.10.2012ರಿಂದ ಪೂರ್ವಾನ್ವಯವಾಗುವಂತೆ ಡಾ. ಗುರುಶಾಂತಪ್ಪ. ಜಿ. ನಂದೂರ್‌ಕರ್ ಇವರಿಗೆ ಪಾವತಿಸಲಾಗುತ್ತಿದೆ. ಅದರೂ ಸದರಿಯವರು ಸದ್ಯ ಬಳಕೆದಾರರ ನಿಧಿಯಿಂದ ಪಾವತಿಸುತ್ತಿರುವ ವೇತನವನ್ನು ರೂ. 30,000/- ದಿಂದ ರೂ. 50,000/-ದವರೆಗೆ ವೇತನವನ್ನು ಹೆಚ್ಚಿಸುವಂತೆ ಕೋರಿರುತ್ತಾರೆ.

ರೇಡಿಯಾಲಜಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ಸದ್ಯ ಸಂಸ್ಥೆಯು ನೀಡುತ್ತಿರುವ ವೇತನವು ತುಂಬಾ ಕಡಿಮೆಯಾಗಿದೆಯಂದು ಮತ್ತು ಇತರ ಸಂಸ್ಥೆಗಳಿಗೆ ಹೋಲಿಸಿದಲ್ಲಿ ಇದು ತುಂಬಾ ಕಡಿಮೆ ವೇತನವೆಂದು ತಿಳಿಸಿರುತ್ತಾರೆ. ತಪ್ಪಿದಲ್ಲಿ ತಾವು ಕಾರ್ಯನಿರ್ವಹಿಸುತ್ತಿರುವ ಹುದ್ದೆಗೆ ರಾಜೀನಾಮೆಯನ್ನು ನೀಡುವುದಾಗಿ ಸಹ ಪ್ರಾಧ್ಯಾಕರಾದ ಡಾ. ಗುರುಶಾಂತಪ್ಪ. ಜಿ. ನಂದೂರ್‌ಕರ್ ಹಾಗು ಹಿರಿಯ ಸ್ಥಾನಿಕರಾದ ಡಾ. ರಾಹಿ ಮತ್ತು ಡಾ. ರಜನಿ. ಜಿ.ಎಂ ಇವರು ತಿಳಿಸಿರುತ್ತಾರೆ. ರೇಡಿಯಾಲಜಿ ವಿಭಾಗಕ್ಕೆ ಸಂಬಂಧಿಸಿದ ಅಲ್ಟ್ರಾಸೌಂಡ್ ಮತ್ತ ಎಕ್ಸ್‌ರೇ ಶುಲ್ಕವನ್ನು ಬಳಕೆದಾರರ ನಿಧಿಯಿಂದ ರಿಮ್ಸ್ ಬೋಧಕ ಆಸ್ಪತ್ರೆಯಲ್ಲಿ ಸಂಗ್ರಹಿಸಲಾಗುತ್ತಿದೆ.

ರೇಡಿಯಾಲಜಿ ವಿಭಾಗದಲ್ಲಿ ಪದವಿ ಪಡೆದ ತಜ್ಞ ವೈದ್ಯರು ದೊರೆಯುವುದು ತುಂಬಾ ವಿರಳವಾಗಿರುವುದರಿಂದ, ಎಂ.ಸಿ.ಐ ಮಾನ್ಯತೆಗೆ ತಜ್ಞ ವೈದ್ಯರ ಅವಶ್ಯಕತೆಯಿರುವುದರಿಂದ ಹಾಗು ರೋಗಿಗಳ ಚಿಕಿತ್ಸೆಗೆ ಸದರಿ ವೈದ್ಯರ ಸೇವೆಯು ಅತಿ ಅವಶ್ಯವಾಗಿರುತ್ತದೆ.

ಕಾರಣ ಸಾರ್ವಜನಿಕ ಹಾಗು ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ಮತ್ತು ಎಂ.ಸಿ.ಐ ನಿಯಮಾವಳಿಯನ್ನು ಪೂರೈಸಲು ರೇಡಿಯಾಲಜಿ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ ಸಿಬ್ಬಂದಿಗಳಿಗೆ ವೇತನವನ್ನು ಹೆಚ್ಚಿಸಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ಸಮಯದ ಅಭಾವವಿರುವ ಕಾರಣ ಸದರಿ ವಿಷಯವನ್ನು ಚರ್ಚಿಸಲಾಗದೇ ಮುಂದಿನ ಆಡಳಿತ ಮಂಡಳಿ ಸಭೆಯಲ್ಲಿ ಸಂಪೂರ್ಣ ಮಾಹಿತಿಯೊಂದಿಗೆ ಮಂಡಿಸಲು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

| | | |
|---|---|---|
| (ಡಾ.ಕವಿತಾ ಪಾಟೀಲ್)<br>ನಿರ್ದೇಶಕರು,<br>ರಿಮ್ಸ್, ರಾಯಚೂರು<br>ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ರಿಮ್ಸ್ ಆಡಳಿತ ಮಂಡಳಿ ಸಭೆ,<br>ರಾಯಚೂರು | (ಎನ್.ಶಿವ ಶೈಲಂ) ಭಾ.ಆ.ಸೇ<br>ಸರ್ಕಾರದ ಕಾರ್ಯದರ್ಶಿಗಳು,<br>ಆಕುಕ, ವೈದ್ಯಕೀಯ ಶಿಕ್ಷಣ,<br>ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ<br>ಮಂಡಳಿ ಸಭೆ, ರಾಯಚೂರು | (ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),<br>ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ<br>ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,<br>ರಿಮ್ಸ್, ರಾಯಚೂರು |

| ವಿಷಯ ಸೂಚಿ ಸಂಖ್ಯೆ. ೦೮ | ರಿಮ್ಸ್ ನೂತನ ಬೋಧಕ ಆಸ್ಪತ್ರೆಯ ಕಟ್ಟಡದ ಉದ್ಘಾಟನಾ ಸಮಾರಂಭದ ವೆಚ್ಚಕ್ಕೆ ಅನುಮೋದನೆ ನೀಡುವ ಕುರಿತು. |
|---|---|

ದಿನಾಂಕ 24.11.2014ರಂದು ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ ಇವರಿಂದ ರಿಮ್ಸ್ ಅವರಣದಲ್ಲಿರುವ ನೂತನ 520 ಹಾಸಿಗೆಗಳ ಬೋಧಕ ಆಸ್ಪತ್ರೆಯು ಉದ್ಘಾಟಣೆಗೊಂಡಿರುತ್ತದೆ. ನೂತನ ಆಸ್ಪತ್ರೆಯ ಉದ್ಘಾಟಣೆಯ ಸಿದ್ದತೆಯ ನಿಮಿತ್ತ ಈ ಕೆಳಗಿನಂತೆ ವೆಚ್ಚವಾದ ಹಣವನ್ನು ಸಿಬ್ಬಂದಿ ವೇತನ ಮತ್ತು ಇತರ ವೆಚ್ಚಗಳಿಂದ ಭರಿಸಲಾಗಿರುತ್ತದೆ.

ಕಾರಣ ನೂತನ 520 ಹಾಸಿಗೆಗಳ ಆಸ್ಪತ್ರೆಯ ಉದ್ಘಾಟನೆಯ ನಿಮಿತ್ತ ವೆಚ್ಚವಾದ ಮೊತ್ತಕ್ಕೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

| ಕ್ರಮ ಸಂಖ್ಯೆ. | ವಿವರ | ವೆಚ್ಚದ ಮೊತ್ತ | ಷರಾ |
|---|---|---|---|
| 01 | ಎಸ್.ಕೆ. ರೇಡಿಯಮ್ | 5,000.00 | ನಾಮಫಲಕಗಳ ನಿಮಿತ್ತ |
| 02 | ನೆನೆಪಿನ ಕಾಣಿಕೆಗಳು | 89,768.00 | ಗಣ್ಯ ವ್ಯಕ್ತಿಗಳಿಗೆ ಸನ್ಮಾನಕ್ಕೋಸ್ಕರ |
| 03 | ಆಮಂತ್ರಣ ಪತ್ರಿಕೆಯ ಮುದ್ರಣ | 23,450.00 | |
| 04 | ಯೂಸುಫ್ ಆರ್ಟ್ಸ್ | 4,800.00 | ಆಸ್ಪತ್ರೆಯಲ್ಲಿ ಲಭ್ಯವಿರುವ ಸೌಲಭ್ಯಗಳ ಮಾಹಿತಿ ಫಲಕ ಮತ್ತು ದರಗಳ ವಿವರ |
| 05 | ನೂತನ ಆಸ್ಪತ್ರೆಯ ಅಲಂಕಾರ | 5,000.00 | |
| 06 | ಟ್ಯಾಕ್ಸಿ | 5,000.00 | (ಅತಿಥಿಗಳಿಗೆ ಸಾರಿಗೆ ಸೇವೆಯ ನಿಮಿತ್ತ) |
| 07 | ಅತಿಥಿಗಳಿಗೆ ಲಘು ಉಪಹಾರ ಮತ್ತು ಸಾಮಗ್ರಿಗಳ ಖರೀದಿ | 6,600.00 | |
| 08 | ಡ್ರೈ ಫ್ರೂಟ್ಸ್ & ಹಣ್ಣುಗಳು | 5,200.00 | |
| 09 | ಸಾರಿಗೆಯ ವೆಚ್ಚ | 4,900.00 | ಹಮಾಲಿ, ಆಟೋ ವೆಚ್ಚ |
| | ಒಟ್ಟ ವೆಚ್ಚವಾದ ಮೊತ್ತ | 1,49,718.00 | |

ಸಭೆಯ ತೀರ್ಮಾನ :-

ರಿಮ್ಸ್ ನೂತನ 520 ಹಾಸಿಗೆಗಳ ಬೋಧಕ ಆಸ್ಪತ್ರೆಯ ಉದ್ಘಾಟಣೆಯ ಕಾರ್ಯಕ್ರಮಕ್ಕೆ ವೆಚ್ಚವಾದ ಒಟ್ಟು ರೂ. 1,49,718/- ಗಳನ್ನು ಆಡಳಿತ ಮಂಡಳಿಯು ಪರಿಶೀಲಿಸಿ, ಸರ್ಕಾರದಿಂದ ಸಿಬ್ಬಂದಿ ವೇತನ ಮತ್ತು ಇತರ ವೆಚ್ಚಗಳ ಸಂಬಂಧ ಬಿಡುಗಡೆ ಮಾಡುವ ಅನುದಾನದಿಂದಲೇ ಈ ವೆಚ್ಚವನ್ನು ಭರಿಸುವಂತೆ ಆಡಳಿತ ಮಂಡಳಿಯು ಅನುಮೋದನೆ ನೀಡಿತು.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಸ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

| | |
|---|---|
| ವಿಷಯ ಸೂಚಿ ಸಂಖ್ಯೆ. 09 | ಶ್ರೀ ಕರಿಯಪ್ಪ, ಕಚೇರಿ ಅಧೀಕ್ಷಕರು ಇವರ ಗುತ್ತಿಗೆ ಆಧಾರದ ಸೇವೆಯನ್ನು ಮುಂದುವರೆಸುವ ಕುರಿತು. |

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯು 2007-08ನೇ ಸಾಲಿನಿಂದ ಪ್ರಾರಂಭಗೊಂಡಿದ್ದು, ಪ್ರಾರಂಭದಿಂದಲೂ ಈ ಸಂಸ್ಥೆಗೆ ಆಡಳಿತ ಕಛೇರಿಯಲ್ಲಿ ಪ್ರಾರಂಭದಿಂದಲೂ ಕಛೇರಿ ಅಧೀಕ್ಷಕರನ್ನು ನೇಮಕ ಮಾಡಿಕೊಂಡಿರುವುದಿಲ್ಲ. ಈ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರ.ದ.ಸ, ದ್ವಿ.ದ.ಸ ಮತ್ತು ಗ್ರೂಪ್ ಡಿ ಸಿಬ್ಬಂದಿಗಳಿಗೆ ಆಡಳಿತದಲ್ಲಿ ಸರಿಯಾದ ರೀತಿಯಲ್ಲಿ ಮಾರ್ಗದರ್ಶನ ನೀಡಲು ಒರ್ವ ನಿವೃತ್ತ ಕಛೇರಿ ಅಧೀಕ್ಷಕರ ಸೇವೆಯನ್ನು ಈ ಹಿಂದೆ ಸಂಚಿತ ವೇತನದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿತ್ತು. ಸದರಿಯವರ ಸೇವೆಯು ದಿನಾಂಕ 30.11.2014ಕ್ಕೆ ಮುಕ್ತಾಯಗೊಳ್ಳಲಿದೆ. ಸದರಿಯವರು ತಮ್ಮ ಸೇವೆಯನ್ನು ಮುಂದುವರೆಸುವಂತೆ ಕೋರಿ ದಿನಾಂಕ 28.11.2014ರಂದು ತಮ್ಮ ಮನವಿಯನ್ನು ಈ ಕಾರ್ಯಲಯಕ್ಕೆ ಸಲ್ಲಿಸಿರುತ್ತಾರೆ.

ಕಾರಣ ಸಂಸ್ಥೆಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಶ್ರೀ ಕರಿಯಪ್ಪ, ಕಛೇರಿ ಅಧೀಕ್ಷಕರು ಇವರ ಸೇವೆಯನ್ನು ರಿಮ್ಸ್ ಸಂಸ್ಥೆಯಲ್ಲಿ ಮುಂದುವರೆಸುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ಶ್ರೀ ಕರಿಯಪ್ಪ, ಕಛೇರಿ ಅಧೀಕ್ಷಕರು ಇವರ ಸೇವೆಯನ್ನು ಸಂಸ್ಥೆಯ ಆಡಳಿತಾತ್ಮಕ ಹಿತದೃಷ್ಟಿಯಿಂದ ರಿಮ್ಸ್ ಸಂಸ್ಥೆಯಲ್ಲಿ ಮುಂದಿನ (03) ತಿಂಗಳ ಅವಧಿಗೆ ಮಾತ್ರ ಮುಂದುವರೆಸಲು ಅನುಮತಿಯನ್ನು ನೀಡಿ, ಖಾಯಂ ಕಛೇರಿ ಅಧೀಕ್ಷಕರನ್ನು ಸಂಸ್ಥೆಗೆ ನಿಯೋಜನೆ ಮಾಡುವ ಸಂಬಂಧ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 10 | ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ರಿಮ್ಸ್ ನೂತನ ಬೋಧಕ ಆಸ್ಪತ್ರೆಗೆ ಅವಶ್ಯವಿರುವ 4 ಗಾರ್ಡನರ್, 02 ಪ್ಲಂಬರ್, 04 ಅಫ್ಟ್ಸ್ ಅಪರೇಟರ್, 02 ಗಾರೆ ಕೆಲಸಗಾರರು, ಮತ್ತು 02 ವಿದ್ಯುತ್ ಕರ್ಮಿಗಳನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ. |

ರಾಯಚೂರು ವೈದ್ಯಕೀಯ ಮಹಾವಿದ್ಯಾಲಯದಲ್ಲಿ 21 ವಿವಿಧ ವಿಭಾಗಗಳು 48 ಬೋಧಕ ವಸತಿ ಗೃಹಗಳು, 32 ಗ್ರೂಪ್ ಸಿ, 32 ಗ್ರೂಪ್ ಡಿ ಸಿಬ್ಬಂದಿಗಳ ವಸತಿ ನಿಲಯಗಳು, 164 ವಿದ್ಯಾರ್ಥಿ ಹಾಗೂ 164 ವಿದ್ಯಾರ್ಥಿನಿಯರ ವಸತಿ ನಿಲಯಗಳಿರುತ್ತವೆ. ರಿಮ್ಸ್ ಸಂಸ್ಥೆಯಲ್ಲಿರುವ ಜನರೇಟರ್ ಮ್ಯಾನುವಲ್ ಆಗಿದ್ದು, ವಿದ್ಯುತ್ ಸಂಪರ್ಕ ಕಡಿತಗೊಂಡ ಸಮಯದಲ್ಲಿ ತರಗತಿಗಳು ನಡೆಯುವ ಸಮಯದಲ್ಲಿ ಯಾವುದೇ ರೀತಿ ಅಡಚಣೆಯಾಗದಂತೆ ಜನರೇಟರ್ ನಿರ್ವಹಣಿ ಹಾಗೂ ರಿಮ್ಸ್ ಬೋಧಕ ಆಸ್ಪತ್ರೆಯು ಅತಿ ಅವಶ್ಯಕ ಸೇವೆ ಅಡಿಯಲ್ಲಿ ಬರುವುದರಿಂದ, ಓ.ಟಿ ಮತ್ತು ವಾರ್ಡ್‌ಗಳಲ್ಲಿ ಉದ್ಭವಿಸುವ ವಿದ್ಯುತ್ ಹಾಗೂ ಪ್ಲಂಬಿಂಗ್ ಸಮಸ್ಯಗಳನ್ನು ನಿವಾರಿಸಲು ಎಲೆಕ್ಟ್ರಿಷಿಯನ್ ಹಾಗೂ ಪ್ಲಂಬಿಂಗ್ ಇವರ ಸೇವೆಯು ಅತಿ ಅವಶ್ಯಕವಾಗಿರುತ್ತದೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯವು, ಹೊಸದಾಗಿ ಪ್ರಾರಂಭಗೊಂಡಿರುವುದರಿಂದ ಹಾಗೂ ಎಲ್ಲಾ ವಸತಿ ನಿಲಯಗಳು ಬಹುಮಹಡಿ (ನೆಲಮಹಡಿಯಿಂದ ಎಂಟು ಮಹಡಿಗಳು) ಕಟ್ಟಡಗಳಾಗಿರುವುದರಿಂದ ಹಾಗೂ ಪ್ರತಿನಿತ್ಯ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ವಸತಿ ಗೃಹಗಳಲ್ಲಿ ಅನೇಕ ಗಾರೆ ಕೆಲಸ, ಗಾರ್ಡನರ್, ಲಿಫ್ಟ್, ಪ್ಲಂಬಿಂಗ್ ಹಾಗೂ ವಿದ್ಯುತ್‌ಗೆ ಸಂಬಂಧಿಸಿದ ಕೆಲಸ ಕಾರ್ಯಗಳು ಹಾಗೂ ಅನೇಕ ತೊಂದರೆಗಳಾಗುತ್ತವೆ. ಮತ್ತು ಹಲವು ಬಾರಿ ವಿದ್ಯಾರ್ಥಿ ಹಾಗೂ ವಿದ್ಯಾರ್ಥಿನಿಯರ ವಸತಿ ಗೃಹಗಳಲ್ಲಿ ಒಳ ಚರಂಡಿಗಳು ಬ್ಲಾಕ್ ಆಗಿ ತುಂಬಿ ಹರಿದಾಗ ಅವುಗಳ ದುರಸ್ತಿ ಹಾಗೂ ಸ್ವಚ್ಛತೆಗೆ ಪ್ಲಂಬರ್ ಹಾಗೂ ವಿದ್ಯಾರ್ಥಿಗಳ ವ್ಯಾಸಂಗದ ಹಿತದೃಷ್ಟಿಯಿಂದ ಅನೇಕ ವಿದ್ಯುತ್‌ನ ತೊಂದರೆಗಳು ಉಂಟಾದಾಗ ಹಾಗೂ ವಿದ್ಯುತ್ ಅವಘಡಗಳು ಸಂಭವಿಸಿದಾಗ ಎಲೆಕ್ಟ್ರೀಷಿಯನ್‌ಗಳ ಸೇವೆಯು ದಿನದ 24 ಗಂಟೆಯು ಅವಶ್ಯಕವಾಗಿರುವುದರಿಂದ ಎಲೆಕ್ಟ್ರೀಷಿಯನ್ ಹಾಗೂ ಪ್ಲಂಬರ್ ಹುದ್ದೆಗಳ ಮಂಜೂರಾತಿಯು ಈ ಸಂಸ್ಥೆಗೆ ಅತಿ ಅವಶ್ಯಕವಾಗಿರುತ್ತದೆ.

ಅದೇ ರೀತಿ ರಿಮ್ಸ್ ಸಂಸ್ಥೆಯಲ್ಲಿ ಎಲ್ಲಾ ಬಹುಮಹಡಿ ಕಟ್ಟಡಗಳಿಗೆ 15 ಲಿಫ್ಟ್‌ಗಳನ್ನು ಅಳವಡಿಸಲಾಗುತ್ತಿದೆ. ಲಿಫ್ಟ್‌ಗಳಲ್ಲಿ ಅವಗಡಗಳು ಸಂಭವಿಸಿದಾಗ ಹಾಗೂ ಲಿಫ್ಟ್‌ಗಳ ನಿರ್ವಹಣೆ ಹಾಗೂ ದುರಸ್ಥಿಗೆ ಲಿಫ್ಟ್ ಅಪರೇಟರ್‌ಗಳ ಸೇವೆಯು ಅತಿ ಅವಶ್ಯಕತೆಯಿರುತ್ತದೆ. ಮತ್ತು ಲೋಕೋಪಯೋಗಿ ಇಲಾಖೆಯಿಂದ ನೂತನ ಬೋಧಕ ಆಸ್ಪತ್ರೆಯ ಕಟ್ಟಡವನ್ನು ಸದ್ಯದಲ್ಲಿ ಸಂಸ್ಥೆಗೆ ಹಸ್ತಾಂತರಿಸಲಾಗುತ್ತದೆ. ಇಲ್ಲಿಯವರೆಗೆ ಲಾನ್ ಉದ್ಯಾನ್‌ವನವನ್ನು ಸಂಬಂಧಪಟ್ಟ ಗುತ್ತಿಗೆದಾರರಿಂದ ನಿರ್ವಹಿಸಲಾಗುತ್ತಿತ್ತು. ನೂತನ ಬೋಧಕ ಆಸ್ಪತ್ರೆಗೆ ಸಂಸ್ಥೆಗೆ ಹಸ್ತಾಂತರಿಸಿದ ನಂತರ ಉದ್ಯಾನವನಗಳನ್ನು ಸರಿಯಾಗಿ ನಿರ್ವಹಣೆ ಮಾಡಲು ಗಾರ್ಡನರ್‌ಗಳ ಸೇವೆಯು ಅತಿ ಅವಶ್ಯಕವಿರುತ್ತದೆ.

ಕಾರಣ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ರಿಮ್ಸ್ ನೂತನ ಬೋಧಕ ಆಸ್ಪತ್ರೆಗೆ ಅವಶ್ಯವಿರುವ 4 ಗಾರ್ಡನರ್, 02 ಪ್ಲಂಬರ್, 04 ಲಿಫ್ಟ್ ಅಪರೇಟರ್, 02 ಗಾರೆ ಕೆಲಸಗಾರರು, ಮತ್ತು 02 ವಿದ್ಯುತ್ ಕರ್ಮಿಗಳನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ಹಾಗೂ ರಿಮ್ಸ್ ನೂತನ ಬೋಧಕ ಆಸ್ಪತ್ರೆಗೆ ಅವಶ್ಯವಿರುವ 4 ಗಾರ್ಡನರ್, 02 ಪ್ಲಂಬರ್, 04 ಲಿಫ್ಟ್ ಅಪರೇಟರ್, 02 ಗಾರೆ ಕೆಲಸಗಾರರು, ಮತ್ತು 02 ವಿದ್ಯುತ್ ಕರ್ಮಿಗಳನ್ನು ಹೊರಗುತ್ತಿಗೆ ಆಧಾರದಲ್ಲಿ ನೇಮಕಾತಿ ಮಾಡಿಕೊಳ್ಳಲು ಆಡಳಿತ ಮಂಡಳಿಯ ಅನುಮೋದನೆ ನೀಡಿತು.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ವಿಷಯ ಸೂಚಿ ಸಂಖ್ಯೆ: 11 ಹೊಸದಾಗಿ ನಿರ್ಮಾಣವಾಗಿರುವ 520 ಹಾಸಿಗೆಗಳ ಬೋಧಕ ಆಸ್ಪತ್ರೆಗೆ ಅವಶ್ಯವಿರುವ 120 ಹೆಚ್ಚುವರಿ ಸ್ವಚ್ಚತಾ ಹಾಗು ಭದ್ರತಾ ಸಿಬ್ಬಂದಿಗಳನ್ನು ಹೆಚ್ಚುವರಿಯಾಗಿ ನೇಮಕ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ.

ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ ಹಾಗು ಬೋಧಕ ಆಸ್ಪತ್ರೆಯಲ್ಲಿ ಪ್ರಸ್ತುತ 80 ಸ್ವಚ್ಚತಾ ಕೆಲಸಗಾರರು ಮತ್ತು 50 ಗೃಹ ರಕ್ಷಕ ಭದ್ರತಾ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಈ ಹಿಂದೆ ಜಿಲ್ಲಾ ಆಸ್ಪತ್ರೆಯು 250 ಹಾಸಿಗೆಗಳನ್ನು ಹೊಂದಿದ್ದರಿಂದ ಒಟ್ಟು 90 ಗ್ರೂಪ್ ಡಿ ಹುದ್ದೆಗಳು ಮಾತ್ರ ಮಂಜೂರಾಗಿದ್ದು, 90 ಗ್ರೂಪ್ ಡಿ ಹುದ್ದೆಗಳನ್ನು ಸ್ವಚ್ಚತಾ ಕಾರ್ಯಕ್ಕಾಗಿ ಹಾಗೂ ದಿನನಿತ್ಯದ ಕಾರ್ಯ ಚಟುವಟಿಕೆಗಳಿಗೆ ಅವರ ಸೇವೆಯನ್ನು ಪಡೆಯಲಾಗಿತ್ತು.

ಭಾರತೀಯ ವೈದ್ಯಕೀಯ ಮಂಡಳಿಯ ನಿಯಮದಂತೆ ರಿಮ್ಸ್ ಬೋಧಕ ಆಸ್ಪತ್ರೆಯ ಅವರಣದಲ್ಲಿ ನೂತನವಾಗಿ 520 ಹಾಸಿಗೆಗಳ ಸುಸಜ್ಜಿತ ಬೋಧಕ ಆಸ್ಪತ್ರೆಯ ಕಟ್ಟಡ ಪೂರ್ಣಗೊಂಡಿರುವುದರಿಂದ ಹಳೆಯ ಬೋಧಕ ಆಸ್ಪತ್ರೆಯನ್ನು ನೂತನ ಆಸ್ಪತ್ರೆಗೆ ಸ್ಥಳಾಂತರಿಸಿದಲ್ಲಿ 520 ಹಾಸಿಗೆ + ಓಪೆಕ್ ಆಸ್ಪತ್ರೆಯ ಹಾಸಿಗೆ ಸಾಮಾರ್ಥ್ಯ 350 ಹಾಸಿಗೆ ಸೇರಿ 870 ಹಾಸಿಗೆಗಳ ಸಾಮಾರ್ಥ್ಯ ಹೊಂದಿರುವುದರಿಂದ ಸ್ವಚ್ಚತಾ ಮತ್ತು ಭದ್ರತಾ ಸಿಬ್ಬಂದಿಗಳ ಕೊರತೆ ಉಂಟಾಗುತ್ತದೆ. ಅದುದರಿಂದ ಸದ್ಯ ಕಾರ್ಯನಿರ್ವಹಿಸುತ್ತಿರುವ (80 ಸ್ವಚ್ಚತೆ + 50 ಗೃಹರಕ್ಷಕ ಸಿಬ್ಬಂದಿ) 130 ಸಿಬ್ಬಂದಿಗಳನ್ನು ಹೊರತು ಪಡಿಸಿ ಹೆಚ್ಚುವರಿಯಾಗಿ 120 (80 ಸ್ವಚ್ಚತೆ + 40 ಭದ್ರತೆ) ಸಿಬ್ಬಂದಿಗಳನ್ನು ನೂತನ ಬೋಧಕ ಆಸ್ಪತ್ರೆಯ ಸ್ವಚ್ಚತೆ & ಭದ್ರತೆಯನ್ನು ಕಾಪಾಡುವ ಹಿತದೃಷ್ಟಿಯಿಂದ ನೇಮಕ ಮಾಡಿಕೊಳ್ಳುವುದು ಅತಿ ಅವಶ್ಯವಾಗಿರುತ್ತದೆ.

ಕಾರಣ ಸದರಿ ಸಿಬ್ಬಂದಿಯನ್ನು ಹೊರಗುತ್ತಿಗೆಯ ಆಧಾರದ ಮೇಲೆ ಹೆಚ್ಚುವರಿಯಾಗಿ 120 (80 ಸ್ವಚ್ಚತೆ + 40 ಭದ್ರತೆ) ಸಿಬ್ಬಂದಿಗಳನ್ನು ನೇಮಕ ಮಾಡಿಕೊಳ್ಳಲು ಆಡಳಿತ ಮಂಡಳಿ ಸಭೆಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ಸದ್ಯ ಕಾರ್ಯನಿರ್ವಹಿಸುತ್ತಿರುವ (80 ಸ್ವಚ್ಚತೆ + 50 ಗೃಹರಕ್ಷಕ ಸಿಬ್ಬಂದಿ) 130 ಸಿಬ್ಬಂದಿಗಳನ್ನು ಹೊರತು ಪಡಿಸಿ, ರಿಮ್ಸ್ ನೂತನ ಬೋಧಕ ಆಸ್ಪತ್ರೆಯ ಸ್ವಚ್ಚತೆ & ಭದ್ರತೆಯನ್ನು ಕಾಪಾಡುವ ಹಿತದೃಷ್ಟಿಯಿಂದ ಹೆಚ್ಚುವರಿಯಾಗಿ ಅವಶ್ಯವಿರುವ 120 (80 ಸ್ವಚ್ಚತೆ + 40 ಭದ್ರತೆ) ಸಿಬ್ಬಂದಿಗಳನ್ನು ಹೊರಗುತ್ತಿಗೆಯ ಆಧಾರದ ಮೇಲೆ ನೇಮಕಾತಿ ಮಾಡಲು ಅನುಮೋದನೆಯನ್ನು ನೀಡಿತು. ಹಾಗೂ ರಿಮ್ಸ್ ವೈದ್ಯಕೀಯ ಮಹಾವಿದ್ಯಾಲಯ, ರಿಮ್ಸ್ ನೂತನ ಬೋಧಕ ಆಸ್ಪತ್ರೆ ಹಾಗೂ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸ್ವಚ್ಚತೆ ಮತ್ತು ಭದ್ರತೆಗಾಗಿ ಅವಶ್ಯವಿರುವ ಒಟ್ಟು ಸ್ವಚ್ಚತೆ ಹಾಗೂ ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಹೊರಗುತ್ತಿಗೆಯ ಆಧಾರದ ಮೇಲೆ ನಿಯಮಾನುಸಾರ ಪತ್ರಿಕಾ ಪ್ರಕಟಣೆ ಮಾಡಿ, ಒಂದೇ ಕ್ರೋಢಿಕೃತ ಟೆಂಡರ್‌ನ್ನು ಕರೆಯಲು ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಸೂಚಿಸಲಾಯಿತು.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

| ವಿಷಯ ಸೂಚಿ ಸಂಖ್ಯೆ. 12 | ಅರವಳಿಕೆ ವಿಭಾಗಗಕ್ಕೆ ಅವಶ್ಯವಿರುವ ಓ.ಟಿ ತಂತ್ರಜ್ಞರನ್ನು ಸಂಚಿತ ವೇತನದಲ್ಲಿ ತಾತ್ಕಲಿಕವಾಗಿ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡುವ ಕುರಿತು. |
|---|---|

ಸರ್ಕಾರದ ಆದೇಶ ಸಂಖ್ಯೆ. ಆಕುಕ / 266 / ಎಂಪಿಎಸ್ / 2006 ದಿನಾಂಕ 12.09.2006ರನ್ವಯ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಒಟ್ಟು 58 ತಂತ್ರಜ್ಞರ ಹುದ್ದೆಗಳು ಈ ಸಂಸ್ಥೆಗೆ ಮಂಜೂರಾಗಿರುತ್ತವೆ. 58 ತಂತ್ರಜ್ಞರ ಹುದ್ದೆಗಳಲ್ಲಿ 36 ಪ್ರಯೋಗಶಾಲ ತಂತ್ರಜ್ಞರು ಇನ್ನುಳಿದ 24 ಹುದ್ದೆಗಳು ಓ.ಟಿ ತಂತ್ರಜ್ಞರ ಹುದ್ದೆಗಳಾಗಿರುತ್ತವೆ. 24 ಓ.ಟಿ ಹುದ್ದೆಗಳಲ್ಲಿ 02 ಹುದ್ದೆಗಳನ್ನು ಮಾತ್ರ ಖಾಯಂ ಆಗಿ ಭರ್ತಿ ಮಾಡಲಾಗಿರುತ್ತದೆ. ಇನ್ನುಳಿದ 22 ಹುದ್ದೆಗಳು ಖಾಲಿ ಉಳಿದಿರುತ್ತವೆ. ಇದರಿಂದಾಗಿ ಅರವಳಿಕೆ ವಿಭಾಗದಲ್ಲಿ ಓ.ಟಿ. ತಂತ್ರಜ್ಞರಿಲ್ಲದೇ ಕಾರ್ಯನಿರ್ವಹಿಸಲು ತುಂಬಾ ತೊಂದರೆಯಾಗುತ್ತದೆಯಂದು ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು ಹಲವಾರು ಬಾರಿ ನಮ್ಮೊಂದಿಗೆ ಚರ್ಚಿಸಿರುತ್ತಾರೆ. ಹಾಗೂ ತುರ್ತಾಗಿ 05 ಓ.ಟಿ ತಂತ್ರಜ್ಞರನ್ನು ನೇಮಕಾತಿ ಮಾಡಿದಲ್ಲಿ ವಿಭಾಗದಲ್ಲಿರುವ ಓ.ಟಿ ತಂತ್ರಜ್ಞರ ಸಮಸ್ಯೆಯನ್ನು ಸ್ವಲ್ಪ ಮಟ್ಟಿಗಾದರೂ ನಿವಾರಿಸಬಹುದೆಂದು ಕೋರಿರುತ್ತಾರೆ.

ಕಾರಣ ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ಅರವಳಿಕೆ ವಿಭಾಗ ಇವರು ಕೋರಿರುವಂತೆ ಅರವಳಿಕೆ ವಿಭಾಗದಕ್ಕೆ ಅವಶ್ಯವಿರುವ 05 ಓ.ಟಿ ತಂತ್ರಜ್ಞರನ್ನು ಸಂಚಿತ ವೇತನದಲ್ಲಿ ನೇಮಕಾತಿ ಮಾಡಿಕೊಳ್ಳಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ಪ್ರಾಧ್ಯಾಪಕರು ಹಾಗೂ ವಿಭಾಗದ ಮುಖ್ಯಸ್ಥರು, ಅರವಳಿಕೆ ವಿಭಾಗ, ರಿಮ್ಸ್ ಬೋಧಕ ಆಸ್ಪತ್ರೆ, ರಾಯಚೂರು ಇವರ ಕೋರಿಕೆಯಂತೆ, ಅರವಳಿಕೆ ವಿಭಾಗಕ್ಕೆ ಅವಶ್ಯವಿರುವ 05 ಓ.ಟಿ ತಂತ್ರಜ್ಞರನ್ನು ಸಂಚಿತ ವೇತನದಲ್ಲಿ ತಾತ್ಕಲಿಕವಾಗಿ ಮುಂದಿನ (03) ತಿಂಗಳ ಅವಧಿಗೆ ನೇಮಕಾತಿ ಮಾಡಿಕೊಳ್ಳಲು ಅನುಮತಿಯನ್ನು ಆಡಳಿತ ಮಂಡಳಿಯು ನೀಡಿತು. ಹಾಗೂ ಸರ್ಕಾರದಿಂದ ಸಂಸ್ಥೆಗೆ ಒಟ್ಟು 24 ಓ.ಟಿ ತಂತ್ರಜ್ಞರ ಹುದ್ದೆಗಳೂ ಮಂಜೂರಾಗಿದ್ದು, ಮಂಜೂರಾದ ಹುದ್ದೆಗಳಲ್ಲಿ ಒಂದು ಹುದ್ದೆ ಮಾತ್ರ ಭರ್ತಿಯಾಗಿದ್ದು, ಬಾಕಿ ಉಳಿದ 23 ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಿಕೊಳ್ಳಲು ಆಡಳಿತ ಮಂಡಳಿಯು ಅನುಮೋದನೆ ನೀಡಿತು.

| ವಿಷಯ ಸೂಚಿ ಸಂಖ್ಯೆ. 13 | ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ **Praxair** ಮೂಲಕ **Liquid Oxygen** ಪೂರೈಕೆ ಮಾಡುತ್ತಿರುವ ಕುರಿತು. |
|---|---|

ಇತರ ಸ್ವಾಯತ್ತ ವೈದ್ಯಕೀಯ ಸಂಸ್ಥೆಗಳಲ್ಲಿ ದ್ರವ್ಯ ಆಮ್ಲಜನಕವನ್ನು ಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ **Praxair** ಮೂಲಕ **Liquid Oxygen** ಪೂರೈಕೆ ಮಾಡಲಾಗುತ್ತಿದೆ. ಇದರಿಂದ **Praxair** ಮೂಲಕ **Liquid Oxygen** ಪೂರೈಕೆ ಮಾಡುತ್ತಿರುವ ದರವು ಅತಿ ಕಡಿಮೆಯಿದ್ದು, ಇವರ ಕಾರ್ಯಕ್ಷಮತೆ, ಲಭ್ಯತೆ ಹಾಗೂ ಆರ್ಥಿಕವಾಗಿ ಅತಿ ಕಡಿಮೆ ದರವಿರುವುದರಿಂದ ಇವರೊಂದಿಗೆ ಮುಂದಿನ ಐದು ವರ್ಷಗಳ (2014-2019) ಅವಧಿಗೆ ಒಪ್ಪಂದವನ್ನು ಮಾಡಿಕೊಳ್ಳಲಾಗಿದೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಕಾರಣ **Praxair** ಇವರ ಕಾರ್ಯಕ್ಷಮತೆ, **Liquid Oxygen** ಪೂರೈಕೆ ಹಾಗೂ ಆರ್ಥಿಕವಾಗಿ ಅತಿ ಕಡಿಮೆ ದರವಿರುವುದರಿಂದ ಇವರೊಂದಿಗೆ ಮುಂದಿನ 10 ವರ್ಷಗಳ ಅವಧಿಗೆ ಒಡಂಬಡಿಕೆ ಮಾಡಿಕೊಳ್ಳುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

**Praxair** ಇವರ ವತಿಯಿಂದ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಪೂರೈಕೆ ಮಾಡಲಾಗುತ್ತಿರುವ **Liquid Oxygen**ನ ಬಗ್ಗೆ ಒಪ್ಪಂದವನ್ನು ಮಾಡಿಕೊಂಡಿರುವುದನ್ನು ಪರಿಶೀಲಿಸಲಾಯಿತು.

**Praxair** ಇವರ ಸೇವೆಯ ಗುಣಮಟ್ಟದ ಬಗ್ಗೆ ವಿಶೇಷಾಧಿಕಾರಿಗಳು ಪರಿಚಯಿಸಿ, ಮುಂದಿನ 10 ವರ್ಷಗಳ ಅವಧಿಗೆ **Praxair** ಇವರೊಂದಿಗೆ ಒಪ್ಪಂದ ಮಾಡಿಕೊಳ್ಳುವ ಬಗ್ಗೆ ಆಡಳಿತ ಮಂಡಳಿಯು ಪರಿಶೀಲಿಸಿ, ಈಗಾಗಲೇ ಐದು ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಂಡಿರುವುದರಿಂದ **Praxair** ಇವರೊಂದಿಗೆ 10 ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಳ್ಳುವುದನ್ನು ಬೇಡವೆಂದು ನಿರ್ದೇಶನ ನೀಡಲಾಯಿತು. ಹೊಸದಾಗಿ ಟೆಂಡರ್ ಪ್ರಕ್ರಿಯೆಯಾಗುವವರೆಗೆ ಸದರಿಯವರ ಬಿಲ್ಲುಗಳನ್ನು ತಡೆಹಿಡಿಯದೇ ಇರುಲು ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 14 | ವಿಶೇಷಾಧಿಕಾರಿಗಳು, ಓಪೆಕ್ ಇವರಿಗೆ **Ford Figo – Model 1.4 DSI ZXI** ನೂತನ ವಾಹನವನ್ನು ನಿಯಮಾನುಸಾರ ಖರೀದಿಸಲಾಗಿದ್ದು, ಘಟನೋತ್ತರ ಅನುಮೋದನೆ ನೀಡುವ ಬಗ್ಗೆ. |

ವಿಶೇಷಾಧಿಕಾರಿಗಳು, ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಇವರ ಮನವಿ ಪತ್ರ ಸಂಖ್ಯೆ. ರಿಮ್ಸ್ / ಆರ್‌ಜಿಎಸ್‌ಎಸ್‌ಎಚ್ (ಓಪೆಕ್) / ಜನರಲ್ / 2014-15 ದಿನಾಂಕ 13.11.2014ರ ಪತ್ರದಲ್ಲಿ ವಿಶೇಷಾಧಿಕಾರಿಗಳು, ಓಪೆಕ್ ಆಸ್ಪತ್ರೆ, ರಾಯಚೂರು ಇವರಿಗೆ ದಿನ ನಿತ್ಯದ ಕಛೇರಿ ಕೆಲಸ ಕಾರ್ಯಗಳ ನಿಮಿತ್ತ ವಾಹನದ ಅವಶ್ಯಕತೆಯಿದ್ದು, ಈ ಸಂಬಂಧವಾಗಿ ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ವಾಹನದ ಖರೀದಿಗೆ ಅನುಮತಿಯನ್ನು ನೀಡಿ, ವಾಹನದ ಖರೀದಿಗೆ ಬೇಕಾದ ಅನುದಾನವನ್ನು ಓಪೆಕ್ ಆಸ್ಪತ್ರೆಗೆ ಸರ್ಕಾರವು ಬಿಡುಗಡೆ ಮಾಡುವ ಅನುದಾನದಿಂದಲೇ ಭರಿಸುವಂತೆ ಸೂಚಿಸಿದ್ದರು.

| | | |
|---|---|---|
| (ಡಾ.ಕವಿತಾ ಪಾಟೀಲ್)<br>ನಿರ್ದೇಶಕರು,<br>ರಿಮ್ಸ್, ರಾಯಚೂರು<br>ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ರಿಮ್ಸ್ ಆಡಳಿತ ಮಂಡಳಿ ಸಭೆ,<br>ರಾಯಚೂರು | (ಎನ್.ಶಿವ ಶೈಲಂ) ಭಾ.ಆ.ಸೇ<br>ಸರ್ಕಾರದ ಕಾರ್ಯದರ್ಶಿಗಳು,<br>ಆಕುಕ, ವೈದ್ಯಕೀಯ ಶಿಕ್ಷಣ,<br>ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ<br>ಮಂಡಳಿ ಸಭೆ, ರಾಯಚೂರು | (ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),<br>ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ<br>ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,<br>ರಿಮ್ಸ್, ರಾಯಚೂರು |

ಸರ್ಕಾರಿ ಆದೇಶ ಸಂಖ್ಯೆ ಆಕುಕ / 103 / ಎಂಎಂಇ / 2011 ದಿನಾಂಕ 26.04.2013ರನ್ವಯ ವೈದ್ಯಕೀಯ ಶಿಕ್ಷಣ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಸ್ವಾಯತ್ತ ಸಂಸ್ಥೆಗಳ / ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳ ನಿರ್ದೇಶಕರು ರೂ. 5.00 ಲಕ್ಷ (ತೆರಿಗೆ ಹೊರತು ಪಡಿಸಿ) ಬೆಲೆಯ ವಾಹನವನ್ನು ಖರೀದಿಸತಕ್ಕದ್ದೆಂದು ಹಾಗೂ ಇದಕ್ಕಿಂತ ಹೆಚ್ಚಿನ ಬೆಲೆಯ ವಾಹನವನ್ನು ಖರೀದಿಸಬೇಕೆಂದು ತಿಳಿಸಲಾಗಿರುತ್ತದೆ.

ಈ ಹಿನ್ನಲೆಯಲ್ಲಿ ವಿಶೇಷಾಧಿಕಾರಿಗಳಿಗೆ ವಾಹನದ ಅವಶ್ಯಕತೆಯಿರುವುದರಿಂದ ಜರೂರಾಗಿ ಖರೀದಿ ಮಾಡುವ ತತ್ಸಬಂಧ **Ford Figo – Model 1.4 DSI ZXI** ವಾಹನವು ಸರ್ಕಾರದ ಆದೇಶದಂತೆ ಇದರ ಬೆಲೆ ರೂ. 4,80,216/-ಗಳು + 69,631/- (ತೆರಿಗೆ ಪ್ರತ್ಯೇಕ) ಸೇರಿ ರೂ. 5,49,847/- ಗಳಾಗಿರುವುದರಿಂದ ಸರ್ಕಾರ ಆದೇಶದಂತೆ ವಾಹನವನ್ನು ನಿಯಮಾನುಸಾರ ಖರೀದಿ ಮಾಡಲಾಗಿದೆ.

ಕಾರಣ ಸರ್ಕಾರದ ಆದೇಶದಂತೆ ಖರೀದಿ ಮಾಡಲಾದ ವಾಹನ **Ford Figo – Model 1.4 DSI ZXI** ನ್ನು ಆಡಳಿತ ಮಂಡಳಿಯ ಘಟನೋತ್ತರ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ವಿಶೇಷಾಧಿಕಾರಿಗಳು, ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ, ರಾಯಚೂರು ಇವರಿಗೆ ದಿನ ನಿತ್ಯದ ಕೆಲಸ ಕಾರ್ಯಗಳ ನಿಮಿತ್ತ ಸರ್ಕಾರಿ ಆದೇಶ ಸಂಖ್ಯೆ ಆಕುಕ / 103 / ಎಂಎಂಇ / 2011 ದಿನಾಂಕ 26.04.2013ರನ್ವಯ **Ford Figo – Model 1.4 DSI ZXI** ವಾಹನವನ್ನು ನಿಯಮಾನುಸಾರ ಖರೀದಿಸಿರುವ ಬಗ್ಗೆ ಆಡಳಿತ ಮಂಡಳಿಯು ಪರಿಶೀಲಿಸಿ ಅನುಮೋದನೆ ನೀಡಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 15 | ರಾಜೀವ ಗಾಂದಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಉಪಕರಣಗಳನ್ನು ಖರೀದಿಸಲು ಅಲ್ಪಾವಧಿ ಟೆಂಡರ್ ಕರೆಯಲು ಅನುಮತಿ ನೀಡುವ ಬಗ್ಗೆ. |

ಸರ್ಕಾರದ ಆದೇಶ ಸಂಖ್ಯೆ. ಆಕುಕ / 227 / ಎಂಎಂಇ / 2013 ದಿನಾಂಕ 25.10.2013ರನ್ವಯ ರಾಜೀವ ಗಾಂದಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಕ್ಯಾಥ್ ಮತ್ತು ನಾನ್ ಕ್ಯಾಥ್ ಲ್ಯಾಬ್ ಉಪಕರಣಗಳ ಟೆಂಡರ್ ಕರೆಯಲಾಗಿತ್ತು. ಇವುಗಳಲ್ಲಿ ಕ್ಯಾಥ್ ಲ್ಯಾಬ್ ಉಪಕರಣವು ಪೂರೈಕೆಯಾಗಿರುತ್ತದೆ. ಆದರೆ ನಾನ್ ಕ್ಯಾಥ್ ಲ್ಯಾಬ್ ಉಪಕರಣಗಳಲ್ಲಿ ಈ ಕೆಳಕಂಡ ಉಪಕರಣಗಳಿಗೆ ಯಾವುದೇ ಟೆಂಡರ್‌ದಾರರು ಭಾಗವಹಿಸದೇ ಇರುವುದರಿಂದ ಮರು ಟೆಂಡರ್ ಕರೆಯಬೇಕಾಗಿದೆ. ಸದರಿ ಉಪಕರಣಗಳು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಬರುವ ರೋಗಿಗಳ ಚಿಕಿತ್ಸೆಗೆ ಅತಿ ಅವಶ್ಯಕವಾಗಿರುತ್ತವೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

| ಕ್ರಮ ಸಂಖ್ಯೆ | ಉಪಕರಣದ ಹೆಸರು | ಅವಶ್ಯವಿರುವ ಉಪಕರಣಗಳ ಸಂಖ್ಯೆ. | ಪ್ರತಿ ಉಪಕರಣದ ಅಂದಾಜು ಮೊತ್ತ | ಒಟ್ಟು ಮೊತ್ತ |
|---|---|---|---|---|
| 01 | Digital X-ray with fluoroscope 750 MA / Computerized Radiography | 01 | 1,00,00,000.00 | 1,00,00,000.00 |
| 02 | Ultrasound | 01 | 20,00,000.00 | 20,00,000.00 |
| 03 | Laparoscopy set with three chip camera, Paediatric Telescope with accessories | 01 | 32,00,000.00 | 32,00,000.00 |
| 04 | Boyle's Apparatus (work Station) | 02 | 35,00,000.00 | 70,00,000.00 |
| 05 | ECG (Portable) | 10 | 40,000.00 | 4,00,000.00 |
| 06 | Rigid Bronchoscope | 01 | 75,000.00 | 75,000.00 |
| | ಒಟ್ಟು | 16 | 1,88,15,000.00 | 2,26,75,000.00 |

ಕಾರಣ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಈ ಮೇಲ್ಕಂಡ ಉಪಕರಣಗಳನ್ನು ಕೆ.ಟಿ.ಪಿ.ಪಿ ನಿಯಾಮಾವಳಿಯನ್ವಯ ಅಲ್ಪಾವಧಿ ಟೆಂಡರ್ ಆಹ್ವಾನಿಸಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ 06 ಉಪಕರಣಗಳು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಬರುವ ರೋಗಿಗಳ ಚಿಕಿತ್ಸೆಗೆ ಅತಿ ಅವಶ್ಯಕವಾಗಿರುವುದರಿಂದ ಸದರಿ ಉಪಕರಣಗಳಿಗೆ ಅನುದಾನದ ಲಭ್ಯತೆಯಿದ್ದಲ್ಲಿ, ಟೆಂಡರ್ ಆಹ್ವಾನಿಸಲು ಕೆ.ಟಿ.ಪಿ.ಪಿ ನಿಯಾಮಾವಳಿಯನ್ವಯ ಒಟ್ಟು ರೂ. 1,36,75,000/- ವೆಚ್ಚದಲ್ಲಿ ಟೆಂಡರ್ ಆಹ್ವಾನಿಸಲು ಆಡಳಿತ ಮಂಡಳಿಯು ಪರಿಶೀಲಿಸಿ ಈ ಕೆಳಕಂಡಂತೆ ಅನುಮೋದನೆ ನೀಡಿತು.

| ಕ್ರಮ ಸಂಖ್ಯೆ | ಉಪಕರಣದ ಹೆಸರು | ಅವಶ್ಯವಿರುವ ಉಪಕರಣಗಳ ಸಂಖ್ಯೆ. | ಪ್ರತಿ ಉಪಕರಣದ ಅಂದಾಜು ಮೊತ್ತ | ಒಟ್ಟು ಮೊತ್ತ |
|---|---|---|---|---|
| 01 | Computerized Radiography | 01 | 10,00,000.00 | 10,00,000.00 |
| 02 | Ultrasound | 01 | 20,00,000.00 | 20,00,000.00 |
| 03 | Laparoscopy set with three chip camera, Paediatric Telescope with accessories | 01 | 32,00,000.00 | 32,00,000.00 |
| 04 | Boyle's Apparatus (work Station) | 02 | 35,00,000.00 | 70,00,000.00 |
| 05 | ECG (Portable) | 10 | 40,000.00 | 4,00,000.00 |
| 06 | Rigid Bronchoscope | 01 | 75,000.00 | 75,000.00 |
| | ಒಟ್ಟು | 16 | 98,15,000.00 | 1,36,75,000.00 |

(ಡಾ. ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಸ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

| | |
|---|---|
| ವಿಷಯ ಸೂಚಿ ಸಂಖ್ಯೆ. 16 | ರಾಜೀವ ಗಾಂದಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಕಿರಿಯ ಸ್ಥಾನಿಕ ವೈದ್ಯಾಧಿಕಾರಿಗಳನ್ನು ನೇಮಕಾತಿ ಮಾಡಿಕೊಳ್ಳಲು ವಿಶೇಷಾಧಿಕಾರಿಗಳು, ಓಪೆಕ್ ಇವರಿಗೆ ಅನುಮತಿ ನೀಡುವ ಬಗ್ಗೆ. |

ಪ್ರಾರಂಭದಿಂದಲೂ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಖಾಲಿ ಇರುವ ಹುದ್ದೆಗಳನ್ನು ಇಲ್ಲಿಯವರೆಗೆ ರಿಮ್ಸ್‌ನ ಬೈಲಾ ನಿಯಮದಂತೆ ನೇಮಕಾತಿ ಮಾಡಲು ಕ್ರಮ ಜರುಗಿಸಲಾಗುತ್ತಿದೆ. ಆದರೆ ವಿಶೇಷಾಧಿಕಾರಿಗಳನ್ನು ಎಲ್ಲಿಯೂ ಸಹ ಸದಸ್ಯರೆಂದು ಬಿಂಬಿಸಿರುವುದಿಲ್ಲ. ಸರ್ಕಾರವು ಓಪೆಕ್ ಆಸ್ಪತ್ರೆಗೆ ವಿಶೇಷಾಧಿಕಾರಿಯೆಂದು ನೇಮಕಾತಿ ಮಾಡಿದರೂ ಸಹ ಪ್ರತಿಯೊಂದು ಕಡತದ ಅನುಮೋದನೆಗೆ ರಿಮ್ಸ್‌ಗೆ ತೆರಳಬೇಕಾಗಿರುತ್ತದೆ. ರಿಮ್ಸ್‌ನಿಂದ ನಾವು ಸಲ್ಲಿಸಿದ ಕಡತವು ಸಮುಚಿತ ಮಾರ್ಗದ ಮುಖಾಂತರ ಸರ್ಕಾರಕ್ಕೆ ಹೋಗಿ ಅನುಮತಿಯಾಗುವಷ್ಟರಲ್ಲಿ ಓಪೆಕ್ ಆಸ್ಪತ್ರೆಯಲ್ಲಿ ನೇಮಕಾತಿ ಬಯಸಿದ ಬೋಧಕ ಸಿಬ್ಬಂದಿಗಳ ಸೇವೆಯು ಇತರ ಸಂಸ್ಥೆಯ ಪಾಲಾಗುತ್ತದೆ.

ಅದುದರಿಂದ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸರ್ಕಾರದಿಂದ ಮಂಜೂರಾದ ಹುದ್ದೆಗಳ ಅವಶ್ಯಕತೆಗನುಗುಣವಾಗಿ ಕಿರಿಯ ಸ್ಥಾನಿಕರನ್ನು ನೇಮಕಾತಿ ಮಾಡಿಕೊಳ್ಳುವ ಅಧಿಕಾರವನ್ನು ಇನ್ನು ಮುಂದೆ ವಿಶೇಷಾಧಿಕಾರಿಗಳು, ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಇವರಿಗೆ ಅನುಮತಿ ನೀಡುವಂತೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸರ್ಕಾರದ ಆದೇಶ ಸಂಖ್ಯೆ. ಆಕುಕ / 138 / ಎಂಎಸ್‌ಎಫ್ / 2011 ದಿನಾಂಕ 04.02.2013ರನ್ವಯ ಮಂಜೂರಾಗಿ ಖಾಲಿ ಉಳಿದಿರುವ ಎಲ್ಲಾ ಬೋಧಕ ಸಿಬ್ಬಂದಿ ಹುದ್ದೆಗಳನ್ನು ನಿಯಮಾನುಸಾರ ನೇರ ಸಂದರ್ಶನದ ಮೂಲಕ ಪತ್ರಿಕಾ ಪ್ರಕಟಣೆ ಮಾಡಿ, (ಪತ್ರಿಕಾ ಪ್ರಕಟಣೆಯೊಂದಿಗೆ ಸಂಸ್ಥೆಯ ಅಂತರ್ಜಾಲ ಹಾಗೂ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಅಂತರ್‌ಜಾಲದಲ್ಲಿ ಸಹ ಪ್ರಕಟಿಸುವುದು) ಭರ್ತಿ ಮಾಡಿಕೊಳ್ಳಲು ಆಡಳಿತ ಮಂಡಳಿಯು ಪರಿಶೀಲಿಸಿ, ಅನುಮೋದನೆ ನೀಡಿತು.

| | | |
|---|---|---|
| (ಡಾ.ಕವಿತಾ ಪಾಟೀಲ್)<br>ನಿರ್ದೇಶಕರು,<br>ರಿಮ್ಸ್, ರಾಯಚೂರು<br>ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ರಿಮ್ಸ್ ಆಡಳಿತ ಮಂಡಳಿ ಸಭೆ,<br>ರಾಯಚೂರು | (ಎನ್.ಶಿವ ಶೈಲಂ) ಭಾ.ಆ.ಸೇ<br>ಸರ್ಕಾರದ ಕಾರ್ಯದರ್ಶಿಗಳು,<br>ಆಕುಕ, ವೈದ್ಯಕೀಯ ಶಿಕ್ಷಣ,<br>ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ<br>ಮಂಡಳಿ ಸಭೆ, ರಾಯಚೂರು | (ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),<br>ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ<br>ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,<br>ರಿಮ್ಸ್, ರಾಯಚೂರು |

| ವಿಷಯ ಸೂಚಿ ಸಂಖ್ಯೆ. 17 | ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿರುವ ಒಳಚರಂಡಿಗಳು ಮತ್ತು ವಸತಿ ಗೃಹಗಳನ್ನು ದುರಸ್ಥಿಗೊಳಿಸಲು ಅನುಮತಿ ನೀಡುವ ಕುರಿತು. |
|---|---|

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಸುಮಾರು 18 ವಸತಿ ಗೃಹಗಳಿದ್ದು, ವಸತಿ ಗೃಹಗಳನ್ನು ನಿರ್ಮಿಸಿ ಸುಮಾರು 15 ವರ್ಷಗಳಾಗಿರುತ್ತದೆ. ಆದರೆ ಈವರೆಗೆ ಸದರಿ ಬೋಧಕ ಸಿಬ್ಬಂದಿ ವಸತಿ ಗೃಹಗಳನ್ನು ದುರಸ್ಥಿ ಮಾಡದೇ ಇರುವುದರಿಂದ ಯಾವುದೇ ವೈದ್ಯರುಗಳಿಗೆ ಸದರಿ ವಸತಿ ಗೃಹಗಳನ್ನು ಹಂಚಿಕೆ ಮಾಡಿದಾಗ ವಾಸ ಮಾಡಲು ಹಿಂಜರಿಯುತ್ತಿದ್ದಾರೆ. ಈ ಬಗ್ಗೆ ಲೋಕೋಪಯೋಗಿ ಇಲಾಖೆಯ ಅಧಿಕಾರಿಗಳು ಓಪೆಕ್ ಆಸ್ಪತ್ರೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿರುತ್ತಾರೆ. ಈ ಎಲ್ಲಾ ವಸತಿ ಗೃಹಗಳನ್ನು ದುರಸ್ಥಿ ಮಾಡಿ ಮೊದಲನೇ ಸ್ಥಿತಿಗೆ ತರುವುದು ಅವಶ್ಯಕತೆಯಿರುತ್ತದೆ. ಅಲ್ಲದೇ ಓಪೆಕ್ ಆಸ್ಪತ್ರೆಯ ಎಲ್ಲಾ ಒಳ ಚರಂಡಿಗಳನ್ನು ಬ್ಲಾಕ್ ಆಗಿದ್ದು, ಒಳ ಚರಂಡಿಯಲ್ಲಿ ಬ್ಲಾಕ್ ಆಗಿರುವ ಅನಾವಶ್ಯಕ ವಸ್ತುಗಳನ್ನು ಹೊರತೆಗೆದು ಹಾಕಿ ಚರಂಡಿ ನೀರು ಸರಾಗವಾಗಿ ಹರಿಯುವಂತೆ ಮಾಡಬೇಕಾಗಿರುತ್ತದೆ. ಚರಂಡಿ ನೀರು ತುಂಬಿ ಹೊರ ಹರಿಯುತ್ತಿರುವುದರಿಂದ ಒಂದು ರೀತಿಯ ಕಲುಷಿತ ವಾತವರಣ ಉಂಟಾಗಿ, ಸಾಂಕ್ರಮಿಕ ರೋಗಗಳು ಹರಡುವ ಭೀತಿಯಲ್ಲಿರುತ್ತೇವೆ. ಈ ಸಂಬಂಧವಾಗಿ ಓಪೆಕ್ ಆವರಣದಲ್ಲಿರುವ ವಸತಿ ಗೃಹಗಳ ದುರಸ್ಥಿ ಹಾಗೂ ಒಳ ಚರಂಡಿ ದುರಸ್ಥಿಗೆ ಬೇಕಾದ ಅಂದಾಜು ಪಟ್ಟಿಯನ್ನು ಸಲ್ಲಿಸುವಂತೆ ಆಯುಕ್ತರು, ನಗರ ಸಭೆ ಹಾಗೂ ಲೋಕೋಪಯೋಗಿ ಇಲಾಖೆಯವರಿಗೆ ಪತ್ರ ಮುಖೇನ ತಿಳಿಸಲಾಗಿರುತ್ತದೆ.

ಕಾರಣ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಅವರಣದಲ್ಲಿರುವ ಬೋಧಕ ಸಿಬ್ಬಂದಿ ವಸತಿ ಗೃಹಗಳನ್ನು ಹಾಗೂ ಓಪೆಕ್ ಆಸ್ಪತ್ರೆಯ ಅವರಣದ ಎಲ್ಲಾ ಒಳ ಚರಂಡಿಗಳ ಹೂಳನ್ನು ತೆಗೆದು ಹಾಕಿ ದುರಸ್ಥಿ ಕಾರ್ಯವನ್ನು ಆಯುಕ್ತರು, ನಗರ ಸಭೆ ಹಾಗೂ ಲೋಕೋಪಯೋಗಿ ಇಲಾಖೆಯವರಿಂದ ಅಂದಾಜು ಪಟ್ಟಿ ಈ ಕಾರ್ಯಲಯಕ್ಕೆ ಸ್ವೀಕೃತಿಯಾದ ನಂತರ ನಿಯಮಾನುಸಾರ ಕೈಗೊಳ್ಳುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಅವರಣದಲ್ಲಿರುವ ಬೋಧಕ ಸಿಬ್ಬಂದಿ ವಸತಿ ಗೃಹಗಳನ್ನು ದುರಸ್ಥಿ ಹಾಗೂ ಒಳ ಚರಂಡಿಗಳನ್ನು ದುರಸ್ಥಿ ಮಾಡಿಸಲು ಅವಶ್ಯವಿರುವ ಅಂದಾಜುಪಟ್ಟಿಯನ್ನು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಇಲಾಖೆ, ರಾಯಚೂರು ಇವರಿಂದ ಸಿದ್ದಪಡಿಸಿ, ಸದರಿ ಅಂದಾಜು ಪಟ್ಟಿಗೆ ಸರ್ಕಾರದ ಅನುಮೋದನೆ ಪಡೆದು ಮುಂದಿನ ಕ್ರಮ ಕೈಗೊಳ್ಳಲು ಸೂಚಿಸಲಾಯಿತು.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

| | |
|---|---|
| ವಿಷಯ ಸೂಚಿ ಸಂಖ್ಯೆ. 18 | ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಭದ್ರತೆಗೆ ಅವಶ್ಯವಿರುವ 10 ಭದ್ರತಾ ಸಿಬ್ಬಂದಿಗಳನ್ನು ಹೊರಗುತ್ತಿಗೆ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡುವ ಬಗ್ಗೆ. |

ದಿನಾಂಕ 24.11.2014ರಂದು ರಿಮ್ಸ್ ನೂತನ ಬೋಧಕ ಆಸ್ಪತ್ರೆಯು ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಉದ್ಘಾಟನೆಗೊಂಡ ನಂತರ ರಿಮ್ಸ್ ನೂತನ ಬೋಧಕ ಆಸ್ಪತ್ರೆಯ ಎಲ್ಲಾ ವಿಭಾಗಗಳನ್ನು ಹಂತಹಂತವಾಗಿ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಿಂದ ರಿಮ್ಸ್ ನೂತನ ಬೋಧಕ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ರಿಮ್ಸ್‌ನ ಎಲ್ಲಾ ವಿಭಾಗಗಳು ನೂತನ ಬೋಧಕ ಆಸ್ಪತ್ರೆಗೆ ಸ್ಥಳಾಂತರ ಗೊಂಡಿರುವುದರಿಂದ, ಓಪೆಕ್ ಆಸ್ಪತ್ರೆಯಲ್ಲಿ ಬೆಲೆಬಾಳುವ ಉಪಕರಣ ಪೀಠೋಪಕರಣಗಳಿಗೆ ಭದ್ರತೆ ಇಲ್ಲದಂತಾಗಿದೆ. ಸದ್ಯಕ್ಕೆ 03 ಭದ್ರತಾ ಸಿಬ್ಬಂದಿಗಳನ್ನು ದಿನಗೂಲಿ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ. ಇನ್ನು ಓಪೆಕ್ ಆಸ್ಪತ್ರೆಗೆ ತುರ್ತಾಗಿ 07 ಭದ್ರತಾ ಸಿಬ್ಬಂದಿಗಳ ಸೇವೆಯನ್ನು ಪಡೆಯುವುದು ಅವಶ್ಯಕತೆಯಿರುತ್ತದೆ.

ಕಾರಣ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ 07 ಭದ್ರತಾ ಸಿಬ್ಬಂದಿಗಳನ್ನು ಪ್ರತಿ ದಿನ ರೂ. 150/- ರಂತೆ (**Need Basis**) ಪಾವತಿಸಿ ನೇಮಕಾತಿ ಮಾಡಿಕೊಳ್ಳಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಭದ್ರತೆಯ ಸಂಬಂಧ 03 ಸಿಬ್ಬಂದಿಗಳನ್ನು ಈಗಾಗಲೇ ನೇಮಕಾತಿ ಮಾಡಿಕೊಂಡಿದ್ದು, ಇನ್ನು ಹೆಚ್ಚುವರಿಯಾಗಿ ಅವಶ್ಯವಿರುವ 07 ಭದ್ರತಾ ಸಿಬ್ಬಂದಿಗಳನ್ನು ಪ್ರತಿ ದಿನ, ಪ್ರತಿ ಸಿಬ್ಬಂದಿಗೆ ರೂ. 150/- ರಂತೆ ಪಾವತಿಸಿ, ಹೊರ ಗುತ್ತಿಗೆಯ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 19 | ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿನ ಪಂಪ್‌ಹೌಸ್, ಎಲ್.ಟಿ ಲೈನ್ ದುರಸ್ಥಿಗೆ ಅನುಮತಿ ನೀಡುವ ಕುರಿತು. |

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ನಗರ ಸಭೆಯಿಂದ ಪೂರೈಕೆಯಾಗುವ ಕುಡಿಯು ನೀರನ್ನು ಪಂಪ್ ಹೌಸ್ ಮುಖಾಂತರ ಎಲ್ಲಾ ಆಸ್ಪತ್ರೆಯ ವಿಭಾಗಗಳು ಮತ್ತು ಓಪೆಕ್ ಆಸ್ಪತ್ರೆಯ ಅವರಣದಲ್ಲಿರುವ ವಸತಿ ಗೃಹಗಳಿಗೆ ನೀರನ್ನು ಪೂರೈಸಲಾಗುತ್ತಿದೆ. ಆದರೆ ಈ ಪಂಪ್ ಹೌಸ್‌ನ್ನು ನಿರ್ಮಾಣ ಮಾಡಿ 20 ವರ್ಷಗಳು ಕಳೆದಿರುವುದರಿಂದ ಎಲ್ಲಾ ಕೇಬಲ್ ಮತ್ತು ಪೈಪ್‌ಗಳು ತೂತು ಬಿದ್ದು, ಎಲ್ಲೆಂದರಲ್ಲಿ ನೀರು ಪೋಲಾಗುತ್ತಿದೆ. ಇದರಿಂದ ಆಸ್ಪತ್ರಯ ವಾರ್ಡ್ ಮತ್ತು ವಸತಿ ಗೃಹಗಳಿಗೆ ನೀರು ಸೇರುವ ಮುನ್ನವೇ ನಗರ ಸಭೆಯ ನೀರು ಬಂದಾಗುತ್ತಿದೆ. ಪಂಪ್‌ಹೌಸ್‌ನ ಎಲ್ಲಾ ಕೇಬಲ್ ಮತ್ತು ಪೈಪ್‌ಗಳ ದುರಸ್ಥಿಯಲ್ಲಿರುವುದರಿಂದ ಅವರಣದಲ್ಲಿ ವಾಸವಿರುವ ಸಿಬ್ಬಂದಿಗಳಿಗೆ ನೀರು ಇಲ್ಲದಂತಾಗಿ ನೀರಿನ ಹಾಹಾಕಾರ ಉಂಟಾಗಿರುತ್ತದೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಕಾರಣ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಪಂಪ್‌ಹೌಸ್ ಎಲ್‌ಟಿ ಲೈನ್ ದುರಸ್ಥಿಕಾರ್ಯಗಳನ್ನು ಕೈಗೊಳ್ಳಲು ಅಂದಾಜು ರೂ. 70,000/- ಗಳ ಅವಶ್ಯಕತೆಯಿದ್ದು, ಕೂಡಲೇ ಪಂಪ್‌ಹೌಸ್‌ನ ಎಲ್ಲಾ ಕಾರ್ಯಗಳನ್ನು ಕೊಟೇಷನ್ ಮೂಲಕ ಕ್ರಮ ಕೈಗೊಂಡು ದುರಸ್ಥಿಗೊಳಿಸಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಪಂಪ್‌ಹೌಸ್ ಮತ್ತು ಎಲ್‌ಟಿ ಲೈನ್ ದುರಸ್ಥಿಕಾರ್ಯಗಳನ್ನು ಕೈಗೊಳ್ಳಲು ರೂ. 70,000/- ಗಳ ವೆಚ್ಚದಲ್ಲಿ ದುರಸ್ಥಿಗೊಳಿಸಲು ವಿಶೇಷಾಧಿಕಾರಿಗಳು, ಒಪೆಕ್ ಆಸ್ಪತ್ರೆ, ರಾಯಚೂರು ಇವರಿಗೆ ಆಡಳಿತ ಮಂಡಳಿಯು ಪರಿಶೀಲಿಸಿ ಅನುಮೋದನೆ ನೀಡಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 20 | ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕುಬಿಕಲ್ ಪೆನ್ಸಿಂಗ್ ಹಾಗೂ ಇತರ ದುರಸ್ಥಿ ಕಾರ್ಯಗಳಿಗೆ ಎಲೆಕ್ಟ್ರೀಕಲ್ ಪರೀವೀಕ್ಷಕರು, ಜೆಸ್ಕಾಂ ಇವರ ಮಾರ್ಗದರ್ಶನದಂತೆ ದುರಸ್ಥಿ ಮಾಡಿಸಲು ಅನುಮತಿ ನೀಡುವ ಬಗ್ಗೆ. |

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ 33 ಕೆವಿ ಲೈನ್ ಹಾದು ಹೋಗಿರುವುದರಿಂದ ಪದೇ ಪದೇ ವಿದ್ಯುತ್ ಅವಗಢಗಳು ಸಂಭವಿಸುತ್ತಿದ್ದವು. ಇದರಿಂದ ಜೆಸ್ಕಾಂ ಇಲಾಖೆಯ ವತಿಯಿಂದ 33 ಕೆವಿ ಲೈನ್ ಕೆಲಗಡೆ ಹಾದು ಹೋಗಿದ್ದ 11 ಕೆವಿ ಕ್ಯೂಬಿಕಲ್ ಮೀಟರ್‌ನ್ನು ಸ್ಥಳಾಂತರಿಸಲಾಗಿದೆ. ಇದರಿಂದ ವಿದ್ಯುತ್ ಅವಗಢಗಳ ಸಮಸ್ಯ ಬಗೆಹರಿದಂತಾಗಿದೆ. ಆದರೆ 11 ಕೆವಿ ಕ್ಯೂಬಿಕಲ್ ಮೀಟರ್‌ನ ಪರಿಶೀಲನಗೆ ಜೆಸ್ಕಾಂ ಅಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದಾಗ 11 ಕೆವಿ ಕ್ಯೂಬಿಕಲ್ ಮೀಟರ್‌ನ ಸುತ್ತಮುತ್ತ ಕ್ಯೂಬಿಕಲ್ ಪೆನ್ಸಿಂಗ್ ಅಳವಡಿಸದಿರುವ ಬಗ್ಗೆ ಒಪೆಕ್ ಆಸ್ಪತ್ರೆಗೆ ದಿನಾಂಕ 17.07.2014ರಂದು ನೋಟಿಸ್ ಜಾರಿ ಮಾಡಿ, ಕೂಡಲೇ 11 ಕೆವಿ ಕ್ಯೂಬಿಕಲ್ ಮೀಟರ್‌ನ ಸುತ್ತಮುತ್ತ ಕ್ಯೂಬಿಕಲ್ ಪೆನ್ಸಿಂಗ್‌ನ್ನು ಕೂಡಲೇ ಅಳವಡಿಸುವಂತೆ ಸೂಚಿಸಿರುತ್ತಾರೆ.

ಕಾರಣ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ 11 ಕೆವಿ ಕ್ಯೂಬಿಕಲ್ ಮೀಟರ್‌ನ ಸುತ್ತಮುತ್ತ ಕ್ಯೂಬಿಕಲ್ ಪೆನ್ಸಿಂಗ್‌ನ್ನು ಅಳವಡಿಸುವ ಬಗ್ಗೆ ಮತ್ತು ಅವಶ್ಯ ದುರಸ್ಥಿ ಕಾರ್ಯಗಳನ್ನು ರೂ. 1.00 ಲಕ್ಷಗಳ ವೆಚ್ಚದಲ್ಲಿ ಜೆಸ್ಕಾಂ ಅಧಿಕಾರಿಗಳ ಮುಖಾಂತರ ಕೈಗೊಳ್ಳಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ 11 ಕೆವಿ ಕ್ಯೂಬಿಕಲ್ ಮೀಟರ್‌ನ ಸುತ್ತಮುತ್ತ ಅವಶ್ಯವಿರುವ ಕ್ಯೂಬಿಕಲ್ ಪೆನ್ಸಿಂಗ್ ಮತ್ತು ಇತರ ಅವಶ್ಯ ದುರಸ್ಥಿ ಕಾರ್ಯಗಳನ್ನು ಒಂದು ಲಕ್ಷಗಳ ವೆಚ್ಚದಲ್ಲಿ ಜೆಸ್ಕಾಂ ಅಧಿಕಾರಿಗಳ ಮುಖಾಂತರ ನಿಯಮಾನುಸಾರ ಕೈಗೊಳ್ಳಲು ಇವರಿಗೆ ಆಡಳಿತ ಮಂಡಳಿಯು ಪರಿಶೀಲಿಸಿ, ಅನುಮೋದನೆ ನೀಡಿತು.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

| ವಿಷಯ ಸೂಚಿ ಸಂಖ್ಯೆ. 21 | ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿರುವ ಲಾಂಡ್ರಿ ಉಪಕರಣಗಳನ್ನು ದುರಸ್ಥೀ ಮಾಡಿಸುವ ಬಗ್ಗೆ. |
|---|---|

ಪ್ರಸ್ತುತ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಒಟ್ಟು 06 ಲಾಂಡ್ರಿ ಉಪಕರಣಗಳಿದ್ದು, 06 ಲಾಂಡ್ರಿ ಉಪಕರಣಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲ. ಇದರಿಂದ ಪ್ರತಿ ನಿತ್ಯ ಆಸ್ಪತ್ರೆಯ ರೋಗಿಗಳ ಬೆಡ್ ಶೀಟ್, ಪಿಲ್ಲೋ ಕವರ್ಸ್ ಕರ್ಟನ್ಸ್ ಇವುಗಳನ್ನು ಸ್ವಚ್ಛಗೊಳಿಸುವಲ್ಲಿ ತುಂಬಾ ತೊಂದರೆಯಾಗಿರುತ್ತದೆ. ಸದರಿ 06 ಲಾಂಡ್ರಿ ಉಪಕರಣಗಳನ್ನು ದುರಸ್ಥಿಗೊಳಿಸಲು ಅಂದಾಜು ರೂ. 2.00 ಲಕ್ಷಗಳ ಅವಶ್ಯಕತೆಯಿರುತ್ತದೆ.

ಕಾರಣ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ದುರಸ್ಥಿಗೆ ಒಳಗಾಗಿರುವ 06 ಲಾಂಡ್ರಿ ಉಪಕರಣಗಳನ್ನು ರೂ. 2.00 ಗಳ ವೆಚ್ಚದಲ್ಲಿ ದುರಸ್ಥಿ ಮಾಡಿಸಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಪ್ರಸ್ತುತ ಲಭ್ಯವಿರುವ ಎಲ್ಲಾ ಲಾಂಡ್ರಿ ಉಪಕರಣಗಳು ಅಪೋಲೋ ಸಮೂಹದ ಉಪಕರಣಗಳಾಗಿರುವುದರಿಂದ ಹಾಗೂ ಸದರಿ ವಿಷಯದ ಬಗ್ಗೆ ನ್ಯಾಯಲಯದಲ್ಲಿ ಪ್ರಕರಣ ದಾಖಲಾಗಿರುವುದರಿಂದ, ಲಾಂಡ್ರಿ ಉಪಕರಣಗಳ ದುರಸ್ಥಿಯ ಬದಲು ಒಪೆಕ್ ಆಸ್ಪತ್ರೆಗೆ ನೂತನ 06 ಲಾಂಡ್ರಿ ಯಂತ್ರೋಪಕರಣಗಳನ್ನು ಹೊಸದಾಗಿ ಟೆಂಡರ್ ಕರೆದು ಖರೀದಿಸಲು ಅನುಮೋದನೆ ನೀಡಿತು.

ನೂತನ ಲಾಂಡ್ರಿ ಉಪಕರಣಗಳ ಟೆಂಡರ್ ಆಗುವವರೆಗೆ ಲಾಂಡ್ರಿಯನ್ನು **Service Contract** ಗೆ ನೀಡಲು ಆಡಳಿತ ಮಂಡಳಿಯ ಅನುಮೋದನೆ ನೀಡಲಾಯಿತು.

| ವಿಷಯ ಸೂಚಿ ಸಂಖ್ಯೆ. 22 | ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸರ್ಕಾರದ ಆದೇಶದಂತೆ 06 ವೈದ್ಯರನ್ನು ಜಯದೇವ ಹೃದ್ರೋಗ ಸಂಸ್ಥೆಯಿಂದ ನಿಯೋಜನೆಗೊಳಿಸಿರುವ ಕುರಿತು. |
|---|---|

ಸರ್ಕಾರದ ಅಧಿಸೂಚನೆ ಸಂಖ್ಯೆ. ಆಕುಕ / 334 / ಹೆಚ್‌ಎಸ್‌ಹೆಚ್ / 2014 ದಿನಾಂಕ 30.09.2014ರನ್ವಯ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ತಜ್ಞ ವೈದ್ಯರುಗಳು ಲಭ್ಯವಿಲ್ಲದೇ ಇರುವುದನ್ನು ಸರ್ಕಾರವು ಮನಗಂಡು ಅತ್ಯಾವಶ್ಯವಿರುವ ಈ ಕೆಳಕಂಡ ತಜ್ಞ ವೈದ್ಯರುಗಳನ್ನು ಮುಂದಿನ 05 ವರ್ಷಗಳ ಅವಧಿಗೆ ನಿಯೋಜಿಸಲಾಗಿದೆ. ಆದರೆ 06 ವೈದ್ಯರಲ್ಲಿ 03 ವೈದ್ಯರುಗಳು ಈವರೆಗೆ ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಿಲ್ಲ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

| ಕ್ರಮ ಸಂಖ್ಯೆ | ತಜ್ಞರ ಹೆಸರು | ತಜ್ಞತೆ | ಷರಾ |
|---|---|---|---|
| 01 | ಡಾ. ಗೋಪಿನಾಥ್. ಈ.ವಿ | ಕಾರ್ಡಿಯಾಲಜಿಸ್ಟ್ | ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. |
| 02 | ಡಾ. ಲಲಿತ.ಎಸ್ | ಕಾರ್ಡಿಯಾಲಜಿಸ್ಟ್ | ವರದಿ ಮಾಡಿಕೊಂಡಿರುವುದಿಲ್ಲ. |
| 03 | ಡಾ. ಅಜಯ್ ತುರೆ | ಕಾರ್ಡಿಯಾಕ್ ಅನಸ್ಥೇಶಿಯಾಲಜಿಸ್ಟ್ | ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. |
| 04 | ಡಾ. ನಜೀರ್ ಅಹ್ಮದ್ | ಕಾರ್ಡಿಯಾಲಜಿಸ್ಟ್ | ವರದಿ ಮಾಡಿಕೊಂಡಿರುವುದಿಲ್ಲ. |
| 05 | ಡಾ. ಮುರಳಿರಾವ್ | ಕಾರ್ಡಿಯಾಲಜಿಸ್ಟ್ | ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುತ್ತಾರೆ. |
| 06 | ಡಾ. ಪುರುಷೋತ್ತಮ | ಕಾರ್ಡಿಯಾಲಜಿಸ್ಟ್ | ವರದಿ ಮಾಡಿಕೊಂಡಿರುವುದಿಲ್ಲ. |

ಕಾರಣ ಸರ್ಕಾರದ ಆದೇಶದಂತೆ 06 ವೈದ್ಯರಲ್ಲಿ 03 ವೈದ್ಯರಗಳು ಇನ್ನು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವುದಿಲ್ಲ. ಸದರಿ ಅಂಶವನ್ನು ಆಡಳಿತ ಮಂಡಳಿಯ ಗಮನಕ್ಕೆ ತಂದು ಮುಂದಿ ಮಾರ್ಗದರ್ಶನ ಕೋರಿದೆ.

ಸಭೆಯ ತೀರ್ಮಾನ :-

ಸರ್ಕಾರದ ಅಧಿಸೂಚನೆ ಸಂಖ್ಯೆ. ಆಕುಕ / 334 / ಹೆಚ್‌ಎಸ್‌ಹೆಚ್ / 2014 ದಿನಾಂಕ 30.09.2014ರನ್ವಯ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಮೂರು ವೈದ್ಯರು ಕರ್ತವ್ಯಕ್ಕೆ ವರದಿ ಮಾಡಿಕೊಂಡಿರುವ ಬಗ್ಗೆ ಆಡಳಿತ ಮಂಡಳಿಯು ಪರಿಶೀಲಿಸಿ ಅನುಮೋದನೆ ನೀಡಲಾಯಿತು. ಮುಂದುವರೆದು ಹೆಚ್ಚಿನ ಹೃದಯ ರೋಗದ ವೈದ್ಯರ ಅವಶ್ಯಕತೆಯಿದ್ದಲ್ಲಿ ಇ – ಕ್ಲಾಸ್ ಮುಖಾಂತರ ಪಡೆದುಕೊಳ್ಳಲು ಜಯದೇವ ಹೃದ್ರೋಗ ಸಂಸ್ಥೆಯ ನಿರ್ದೇಶಕರೊಂದಿಗೆ ಚರ್ಚಿಸಲು ವಿಶೇಷಾಧಿಕಾರಿಗಳು ಓಪೆಕ್ ಇವರಿಗೆ ಸೂಚಿಸಲಾಯಿತು.

ಮುಂದುವರೆದು ಡಾ. ಅಜಯ್ ತುರೆ ಇವರ ಪತ್ನಿಯು ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಮೂಲತಃ ವಿದ್ಯಾರ್ಹತೆಯಲ್ಲಿ ಅನಸ್ಥೇಶಿಯಾಲಜಿಸ್ಟ್ ಆಗಿರುವುದರಿಂದ ಹಾಗೂ ಓಪೆಕ್ ಆಸ್ಪತ್ರೆಯಲ್ಲಿ ಅನಸ್ಥೇಶಿಯಾಲಜಿಸ್ಟ್ ಹುದ್ದೆಯು ಖಾಲಿ ಇರುವುದರಂದ, ಸದರಿಯವರನ್ನು ಸೇವೆಯನ್ನು ಪತಿ ಪತ್ನಿಯ ಪ್ರಕರಣದಡಿ ಕರ್ನಾಟಕ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಿಂದ ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವರ್ಗಾವಣೆ ಮಾಡಲು ಆಡಳಿತ ಮಂಡಳಿಯು ಅನುಮೋದನೆ ನೀಡಲಾಯಿತು.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

| ವಿಷಯ ಸೂಚಿ ಸಂಖ್ಯೆ. 23 | ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಭದ್ರತಾ ದೃಷ್ಟಿಯಿಂದ ಸಿಸಿಟಿವಿ ಗಳನ್ನು ಅಳವಡಿಸುವ ಬಗ್ಗೆ. |
|---|---|

ದಿನಾಂಕ 24.11.2014ರಂದು ರಿಮ್ಸ್ ನೂತನ ಬೋಧಕ ಆಸ್ಪತ್ರೆಯು ಸನ್ಮಾನ್ಯ ಮುಖ್ಯಮಂತ್ರಿಗಳಿಂದ ಉದ್ಘಾಟನೆಗೊಂಡ ನಂತರ ರಿಮ್ಸ್ ನೂತನ ಬೋಧಕ ಆಸ್ಪತ್ರೆಯ ಎಲ್ಲಾ ವಿಭಾಗಗಳನ್ನು ಹಂತಹಂತವಾಗಿ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಿಂದ ರಿಮ್ಸ್ ನೂತನ ಬೋಧಕ ಆಸ್ಪತ್ರೆಗೆ ಸ್ಥಳಾಂತರಿಸಲಾಗಿದೆ. ರಿಮ್ಸ್‌ನ ಎಲ್ಲಾ ವಿಭಾಗಗಳು ನೂತನ ಬೋಧಕ ಆಸ್ಪತ್ರೆಗೆ ಸ್ಥಳಾಂತರ ಗೊಂಡಿರುವುದರಿಂದ, ಓಪೆಕ್ ಆಸ್ಪತ್ರೆಯಲ್ಲಿ ಬೆಲೆಬಾಳುವ ಉಪಕರಣ ಪೀಠೋಪಕರಣಗಳಿಗೆ ಭದ್ರತೆ ಇಲ್ಲದಂತಾಗಿದೆ. ಈ ಹಿಂದೆ ರಿಮ್ಸ್‌ನ ಭದ್ರತಾ ಸಿಬ್ಬಂದಿಗಳನ್ನು ಕಾವಲಿಗೆ ನಿಯೋಜಿಸಲಾಗಿತ್ತು. ಆದರೆ ಸದರಿ ಸಿಬ್ಬಂದಿಗಳು ಆಸ್ಪತ್ರೆಯು ಸ್ಥಳಾಂತರಗೊಂಡಿರುವುದರಿಂದ ಸದರಿಯವರನ್ನು ಸಹ ಆಸ್ಪತ್ರೆಗೆ ನಿಯೋಜಿಸಲಾಗಿರುತ್ತದೆ. ಪ್ರಸ್ತುತ ಓಪೆಕ್ ಆಸ್ಪತ್ರೆಯಲ್ಲಿ ಯಾವುದೇ ಭದ್ರತಾ ಸಿಬ್ಬಂದಿಗಳು ಇಲ್ಲದಂತಾಗಿದೆ. ಕಾರಣ ಆಸ್ಪತ್ರೆಗೆ ಬರುವ ಎಲ್ಲಾ ರೋಗಿಗಳನ್ನು ಹಾಗೂ ಸಿಬ್ಬಂದಿಗಳ ಕಾರ್ಯವೈಖರಿ ಮತ್ತು ಚಲನವಲನಗಳನ್ನು ಗಮನಿಸಲು ಓಪೆಕ್ ಆಸ್ಪತ್ರೆಗೆ ಭದ್ರತೆಯ ಹಿತದೃಷ್ಟಿಯಿಂದ ಸಿಸಿಟಿವಿ ಅಳವಡಿಸುವುದು ಅನಿವಾರ್ಯವಾಗಿರುತ್ತದೆ.

ಕಾರಣ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಭದ್ರತೆ ಹಿತದೃಷ್ಟಿಯಿಂದ ರೂ. 20.00 ಗಳ ವೆಚ್ಚದಲ್ಲಿ ಸಿಸಿಟಿವಿಗಳನ್ನು ಅಳವಡಿಸಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಭದ್ರತೆಯ ಹಿತದೃಷ್ಟಿಯಿಂದ ಅವಶ್ಯವಿರುವ ಸಿಸಿಟಿವಿ ಕ್ಯಾಮರಗಳನ್ನು ನಿಅಳವಡಿಸಲು ನಿಯಮಾನುಸಾರ ಟೆಂಡರ್ ಕರೆಯಲು ಅಗತ್ಯ ಕ್ರಮ ಕೈಗೊಳ್ಳುವಂತೆ ಅನುಮೋದನೆ ನೀಡಲಾಯಿತು.

| ವಿಷಯ ಸೂಚಿ ಸಂಖ್ಯೆ. 24 | ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಹೊಸ ಗಣಕ ಯಂತ್ರಗಳು, ನೆಟ್‌ವರ್ಕ್ ಕೇಬ್ಲಿಂಗ್, ಯೂಪಿಎಸ್ ಮತ್ತು ಸರ್ವರ್ ಅಳವಡಿಸಲು ಅನುಮತಿ ನೀಡುವ ಕುರಿತು. |
|---|---|

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ದಿನಾಂಕ 01.11.2013ರಿಂದ ಪೂರ್ಣವಾಗಿ ಕಾರ್ಯರಂಭ ಮಾಡಿದ್ದು, ಓಪೆಕ್ ಆಸ್ಪತ್ರೆಯಲ್ಲಿ ಒಟ್ಟು 50 ಗಣಕ ಯಂತ್ರ ನಿರ್ವಾಹಕರು ಕಾರ್ಯನಿರ್ವಹಿಸುತ್ತಿದ್ದಾರೆ. ಆದರೆ ಓಪೆಕ್ ಆಸ್ಪತ್ರೆಯಲ್ಲಿ 20 ಗಣಕ ಯಂತ್ರಗಳು ಮಾತ್ರ ಲಭ್ಯವಿದ್ದು, ಇದರಲ್ಲಿ 05 ಗಣಕ ಯಂತ್ರಗಳು ಮಾತ್ರ ಕಾರ್ಯನಿರ್ವಹಿಸುತ್ತಿವೆ. ಇನ್ನುಳಿದ 15 ಗಣಕ ಯಂತ್ರಗಳು ದುರಸ್ಥಿಯಲ್ಲಿವೆ. ಇದರಿಂದಾಗಿ ಆಸ್ಪತ್ರೆಯ ದಿನನಿತ್ಯದ ಕಾರ್ಯಗಳಿಗೆ ತುಂಬಾ ತೊಂದರೆಯಾಗಿರುತ್ತದೆ. ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಒಟ್ಟು 50 ಗಣಕ ಯಂತ್ರಗಳನ್ನು ಖರೀದಿಸಲು ಹಾಗೂ ಎಂ.ಐ.ಸಿ ಸಾಫ್ಟವೇರ್‌ನ್ನು ಅಳವಡಿಸಲು ಒಟ್ಟು ರೂ. 10.00 ಲಕ್ಷಗಳ ಅವಶ್ಯಕತೆಯಿರುತ್ತದೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಕಾರಣ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಒಟ್ಟು 50 ಗಣಕ ಯಂತ್ರಗಳನ್ನು ಎಂ.ಐ.ಸಿ ಸಾಫ್ಟವೇರ್‌ನೊಂದಿಗೆ ಖರೀದಿಸಿ ಅಳವಡಿಸಲು ಒಟ್ಟು ರೂ. 10.00 ಲಕ್ಷಗಳ ಅವಶ್ಯಕತೆಯಿದ್ದು, ರೂ. 10.00 ಲಕ್ಷಗಳ ವೆಚ್ಚದಲ್ಲಿ ಗಣಕ ಯಂತ್ರಗಳನ್ನು ಎಂ.ಸಿ.ಐ (**Management Information Centere**) ಸಾಫ್ಟವೇರ್‌ನೊಂದಿಗೆ ಖರೀದಿಸಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ಗಣಕ ಯಂತ್ರಗಳನ್ನು ಎಂ.ಐ.ಸಿ (**Management Information Centere**) ಸಾಫ್ಟವೇರ್‌ನೊಂದಿಗೆ ಅವಶ್ಯಕತೆ ಮೇಲೆ ಹೊಸದಾಗಿ ನಿಯಮಾನುಸಾರ ಖರೀದಿಸಿ ಅಳವಡಿಸಲು ಆಡಳಿತ ಮಂಡಳಿಯು ಪರಿಶೀಲಿಸಿ, ಅನುಮೋದನೆ ನೀಡಿತು.

ಪ್ರಸ್ತುತ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ದುರಸ್ಥಿಯಲ್ಲಿರುವ ಎಲ್ಲಾ ಗಣಕ ಯಂತ್ರಗಳನ್ನು ಸಂಪೂರ್ಣವಾಗಿ ದುರಸ್ಥಿಗೊಳಿಸಿ, ಹೊಸ ಗಣಕ ಯಂತ್ರಗಳ ಸ್ಥಿತಿಯಲ್ಲಿರುವಂತೆ ಮಾಡಿ, ಹತ್ತಿರದ ಶಾಲೆಗಳಿಗೆ ಅಥವಾ ಅನಾಥ ಶ್ರಮಕ್ಕೆ ನೀಡುವಂತೆ ಸೂಚಿಸಲಾಯಿತು.

| | |
|---|---|
| ವಿಷಯ ಸೂಚಿ ಸಂಖ್ಯೆ. 25 | ಕ್ಯಾಥ್ ಲ್ಯಾಬ್, ಡಯಾಲಿಸಿಸ್ ಹಾಗೂ ಫೆಷಿಯೊ ಮೆಕ್ಸಿಲರಿ ವಿಭಾಗಗಳ **Accessories** ಗಳು ಅತಿ ಅವಶ್ಯಕತೆಯಿದ್ದು ಖರೀದಿಸಿ ಅಳವಡಿಸಲು ಅನುಮತಿ ನೀಡುವ ಬಗ್ಗೆ. |

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಅವಶ್ಯವಿರುವ ವಿವಿಧ ಉಪಕರಣಗಳನ್ನು ನಿಯಮಾನುಸಾರ ಖರೀದಿಸಿ ಅಳವಡಿಸಲಾಗಿದೆ. ಆದರೆ ಪೂರೈಕೆಯಾದ ಉಪಕರಣಗಳಾದ ಕ್ಯಾಥ್‌ಲ್ಯಾಬ್, ಡಯಾಲಿಸಿಸ್ ಹಾಗೂ ಮೆಕ್ಸಿಲರಿ ವಿಭಾಗಗಳ **Accessories** ಗಳನ್ನು ಪೂರೈಸಿರುವುದಿಲ್ಲ ಇದರಿಂದಾಗಿ ಉಪಕರಣಗಳ ದುರಸ್ಥಿ ಸಮಯದಲ್ಲಿ ಈ **Accessories** ಗಳ ಅವಶ್ಯಕತೆಯಿರುತ್ತದೆ.

ಕಾರಣ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಉಪಕರಣಗಳಾದ ಕ್ಯಾಥ್‌ಲ್ಯಾಬ್, ಡಯಾಲಿಸಿಸ್ ಹಾಗೂ ಮೆಕ್ಸಿಲರಿ ವಿಭಾಗಗಳ **Accessories** ಗಳನ್ನು ರೂ. 10.00 ಲಕ್ಷಗಳ ವೆಚ್ಚದಲ್ಲಿ ನಿಯಮಾನುಸಾರ ಖರೀದಿಸಲು ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಕ್ಯಾಥ್‌ಲ್ಯಾಬ್, ಡಯಾಲಿಸಿಸ್ ಹಾಗೂ ಮೆಕ್ಸಿಲರಿ ವಿಭಾಗಗಳ **Accessories** ಗಳನ್ನು ನಿಯಮಾನುಸಾರ ಖರೀದಿಸಲು ಆಡಳಿತ ಮಂಡಳಿಯು ಪರಿಶೀಲಿಸಿ ಅನುಮೋದನೆ ನೀಡಿತು.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್, ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎನ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

| ವಿಷಯ ಸೂಚಿ ಸಂಖ್ಯೆ. 26 | ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ ವೇತನ ಹೆಚ್ಚಿಸುವ ಬಗ್ಗೆ. |
|---|---|

ಕರ್ನಾಟಕ ಸರ್ಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಹೈದ್ರಾಬಾದಿನ ಅಪೋಲೋ ಸಮೂಹಕ್ಕೆ ಗುತ್ತಿಗೆ ನೀಡಲ್ಪಟ್ಟ ರಾಜೀವ್ ಗಾಂಧಿ ಸೂಪರ್ ಸ್ಪೆಶಾಲಿಟಿ ಆಸ್ಪತ್ರೆಯನ್ನು ಸರ್ಕಾರದ ಆದೇಶ ಸಂಖ್ಯೆ. ಆಕುಕ / 282 / ಸಿಜಿಎಂ / 2012/ ದಿನಾಂಕ :24.05.2012ರನ್ವಯ ರಿಮ್ಸ್ ಸಂಸ್ಥೆಯ ಅಧೀನಕ್ಕೆ ಸದ್ಯ ಯಾವ ಸ್ಥಿತಿಯಲ್ಲಿದೆಯೋ ಅದೇ ಸ್ಥತಿಯಲ್ಲಿ ದಿನಾಂಕ 01.06.2012ರಿಂದ ಹಸ್ತಾಂತರಿಸಿ ಕೊಳ್ಳಲು ಸೂಚಿಸಿದ ಹಿನ್ನಲೆಯಲ್ಲಿ ಅಪೋಲೋ ಸಮೂಹದಿಂದ ನೇಮಕಾತಿ ಹೊಂದಿ ಕರ್ತವ್ಯ ನಿರ್ವಹಿಸುತ್ತಿದ್ದ ಗ್ರೂಪ್ ಸಿ ಮತ್ತು ಗ್ರೂಪ್ ಡಿ ಸಿಬ್ಬಂದಿಗಳನ್ನು ಮಾನವೀಯ ಹಿತದೃಷ್ಟಿಯಿಂದ ಅವರುಗಳ ಸೇವೆಯನ್ನ ಓಪೆಕ್ ಆಸ್ಪತ್ರೆಯಲ್ಲಿ ಮುಂದುವರೆಸಲಾಗಿದೆ.

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ದಿನಾಂಕ 01.11.2013 ರಂದ ಪ್ರಾರಂಭಿಸಲಾಗಿದೆ. ಸದರಿ ಸಿಬ್ಬಂದಿಗಳಿಗೆ ಯಾವ ವೇತನವನ್ನು ನೀಡಬೇಕೆಂಬುದರ ಬಗ್ಗೆ ರಿಮ್ಸ್ ಸಂಸ್ಥೆಯ 17 ಮತ್ತು 18ನೇ ಆಡಳಿತ ಮಂಡಳಿಯಲ್ಲಿ ಮಂಡಿಸಲಾಗಿತ್ತು.

ರಿಮ್ಸ್ ಸಂಸ್ಥೆಯಲ್ಲಿ ಭಾರತೀಯ ವೈದ್ಯಕೀಯ ಮಂಡಳಿಯು ತೋರಿಸಿರುವ ಶುಶ್ರೂಷಕರ ನ್ಯೂನತೆಯನ್ನು ಸರಿಪಡಿಸಲು ಅವಶ್ಯವಿರುವ 100 ಶುಶ್ರೂಷಕರನ್ನು ಸರ್ಕಾರದ ಆದೇಶ ಸಂಖ್ಯೆ. ಆಕುಕ / 190 / ಎಂಎಂಇ / 2012 ದಿನಾಂಕ 04.06.2013ರನ್ವಯ ಸ್ಟೈಫಂಡರಿ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಲಾಗಿತ್ತು. ಈ ಹಿಂದೆ ಓಪೆಕ್ ಆಸ್ಪತ್ರೆಯಲ್ಲಿ ಅಪೋಲೋ ಸಮೂಹದಿಂದ ನೇಮಕಾತಿ ಹೊಂದಿ ಕಾರ್ಯನಿರ್ವಹಿಸುತ್ತಿದ್ದ 76 ಶುಶ್ರೂಷಕರನ್ನು ಪ್ರತಿ ಮಾಹೆ ರೂ. 8,000/-ಗಳ ಸ್ಟೈಪಂಡರಿ ಆಧಾರದ ಮೇಲೆ ಮುಂದಿನ 6 ತಿಂಗಳ ಕಾಲವಧಿಗೆ ಅಥವಾ ಓಪೆಕ್ ಆಸ್ಪತ್ರೆಯ ಬೋಧಕೇತರ ಸಿಬ್ಬಂದಿ ನೇಮಕಾತಿಯಾಗುವವರೆಗೆ ಇವರೆಡರಲ್ಲಿ ಯಾವುದು ಮೊದಲೋ ಅದನ್ನು ಅನುಸರಿಸಿ ನೇಮಕಾತಿ ಮಾಡಿಕೊಳ್ಳುವಂತೆ ಅನುಮೋದನೆ ನೀಡಿದಂತೆ ಓಪೆಕ್ ಆಸ್ಪತ್ರೆಯ ಶುಶ್ರೂಷಕರನ್ನು ಸ್ಟೈಪಂಡರಿ ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲಾಗಿದೆ.

ಅದೇ ರೀತಿ ಅಪೋಲೋ ಸಮೂಹದಿಂದ ನೇಮಕಾತಿ ಹೊಂದಿದ್ದ 100 ಗ್ರೂಪ್ 'ಸಿ' ನೌಕರರನ್ನು ಪ್ರತಿ ಮಾಹೆ ರೂ. 8000/-ಗಳ **stipend** ಆಧಾರದ ಮೇಲೆ ನೇಮಕಾತಿ ಮಾಡಿಕೊಳ್ಳಲು ಆಡಳಿತ ಮಂಡಳಿಯು ಅನುಮತಿ ನೀಡಿತ್ತು. ಹಾಗೂ ಅಪೋಲೋ ಸಮೂಹದಿಂದ ನೇಮಕಾತಿ ಹೊಂದಿದ್ದ, 110 ಗ್ರೂಪ್ 'ಡಿ' ನೌಕರರನ್ನು ಹೊರಗುತ್ತಿಗೆ ಮೂಲಕ (ಏಜನ್ಸಿ) ಪಡೆದುಕೊಳ್ಳಲು ಸೂಚಿಸಿ, ಏಜನ್ಸಿಯವರಿಗೆ ಈ ಹಿಂದೆ ಕಾರ್ಯನಿರ್ವಹಿಸುತ್ತಿದ್ದ 110 ಗ್ರೂಪ್ 'ಡಿ' ನೌಕರರನ್ನೇ ನೇಮಕಾತಿ ಮಾಡಿಕೊಳ್ಳುವಂತೆ ಸೂಚಿಸಿದ ಹಿನ್ನಲೆಯಲ್ಲಿ ಆಡಳಿತ ಮಂಡಳಿಯ ನಿರ್ದೇಶನದಂತೆ ಕ್ರಮ ವಹಿಸಲಾಗಿದೆ.

ಆದರೆ ಓಪಕ್ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಸಿ ಸಿಬ್ಬಂದಿಗಳು ಸದ್ಯ ನೀಡುತ್ತಿರುವ ರೂ. 8000/-ಗಳ **stipend** ವೇತನವು ಅತಿ ಕಡಿಮೆಯಾಗಿದ್ದು, ಬಳ್ಳಾರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಗ್ರೂಪ್ ಸಿ ಸಿಬ್ಬಂದಿಗಳಿಗೆ ರೂ. 13,088/- ಗಳ ವೇತನವನ್ನು ಪಾವತಿಸಲಾಗುತ್ತಿದೆಯಂದು ತಿಳಿಸಿರುತ್ತಾರೆ.

(ಡಾ.ಕವಿತಾ ಪಾಟೀಲ್)
ನಿರ್ದೇಶಕರು,
ರಿಮ್ಸ್ ರಾಯಚೂರು
ಹಾಗೂ ಸದಸ್ಯ ಕಾರ್ಯದರ್ಶಿಗಳು,
ರಿಮ್ಸ್ ಆಡಳಿತ ಮಂಡಳಿ ಸಭೆ,
ರಾಯಚೂರು

(ಎಸ್.ಶಿವ ಶೈಲಂ) ಭಾ.ಆ.ಸೇ
ಸರ್ಕಾರದ ಕಾರ್ಯದರ್ಶಿಗಳು,
ಆಕುಕ, ವೈದ್ಯಕೀಯ ಶಿಕ್ಷಣ,
ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ
ಮಂಡಳಿ ಸಭೆ, ರಾಯಚೂರು

(ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),
ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,
ರಿಮ್ಸ್, ರಾಯಚೂರು

ಕಾರಣ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಸಿ ಸಿಬ್ಬಂದಿಗಳಿಗೆ ರೂ. 13,088/- ಗಳ ವೇತನವನ್ನು ಹೆಚ್ಚಿಸುವ ಬಗ್ಗೆ ಆಡಳಿತ ಮಂಡಳಿಯ ಅನುಮೋದನೆ ಕೋರಿ ಸಲ್ಲಿಸಿದೆ.

ಸಭೆಯ ತೀರ್ಮಾನ :-

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರೂಪ್ ಸಿ ಸಿಬ್ಬಂದಿಗಳಿಗೆ ಆಡಳಿತ ಮಂಡಳಿಯ ನಿರ್ಧಾರದಂತೆ ರೂ. 8000/-ಗಳ **stipend** ವೇತನವನ್ನು ಪಾವತಿಸುತ್ತಿರುವದರಿಂದ, ವೇತನವನ್ನು ಹೆಚ್ಚಿಸದೇ ಇರಲು ಆಡಳಿತ ಮಂಡಳಿಯು ಸೂಚಿಸಿತು. ಅವಶ್ಯವಿದ್ದಲ್ಲಿ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗೆ ಸರ್ಕಾರದ ಆದೇಶ ಸಂಖ್ಯೆ ಆಕುಕ / 138 / ಎಂಎಸ್‌ಎಫ್ / 2011 ದಿನಾಂಕ 04.02.2013ರನ್ವಯ ಮಂಜೂರಾಗಿ ಖಾಲಿ ಉಳಿದಿರುವ ಎಲ್ಲಾ ಬೋಧಕೇತರ ಸಿಬ್ಬಂದಿ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಿಕೊಳ್ಳಲು ಆಡಳಿತ ಮಂಡಳಿಯು ಅನುಮೋದನೆ ನೀಡಿತು.

ಇದೇ ನೇಮಕಾತಿ ಪ್ರಕ್ರಿಯೆಯಲ್ಲಿ ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕೇತರ ಸಿಬ್ಬಂದಿಗಳಿಗೆ ವಯೋಮಿತಿಯಲ್ಲಿ ಸಡಿಲಿಕೆಯನ್ನು ನೀಡುವಂತೆ ಸೂಚಿಸಲಾಯಿತು.

| ವಿಷಯ ಸೂಚಿ ಸಂಖ್ಯೆ. 27 | ಅಧ್ಯಕ್ಷರ ಅಪ್ಪಣೆ ಮೇರೆಗೆ ಇನ್ನಿತರ ವಿಷಯಗಳು |
|---|---|

1) ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಸಂಪೂರ್ಣವಾಗಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನಾಗಿ ಮಾರ್ಪಡಿಸುವ ಬಗ್ಗೆ.

ಸಭೆಯ ತೀರ್ಮಾನ :-

ರಿಮ್ಸ್ ಬೋಧಕ ಆಸ್ಪತ್ರೆಯ ಎಲ್ಲಾ ವಿಭಾಗಗಳು ಹಂತ ಹಂತವಾಗಿ ನೂತನ ಬೋಧಕ ಆಸ್ಪತ್ರೆಗೆ ಸ್ಥಳಾಂತರಗೊಳ್ಳುತ್ತಿದ್ದು, ಎಲ್ಲಾ ವಿಭಾಗಗಳು ಸಂಪೂರ್ಣವಾಗಿ ಸ್ಥಳಾಂತರ ಗೊಂಡ ನಂತರ ರಾಜೀವ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನು ಸಂಪೂರ್ಣವಾಗಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನಾಗಿ ಮಾರ್ಪಡಿಸುವ ಸಂಬಂಧ ಎಲ್ಲಾ ದುರಸ್ಥಿ ಕಾರ್ಯಗಳನ್ನು ಕೈಗೊಳ್ಳಲು ಸಂಪೂರ್ಣ ಓಪೆಕ್ ಆಸ್ಪತ್ರೆಯ ದುರಸ್ಥಿ ಕಾರ್ಯಗಳನ್ನು ಪಟ್ಟಿ ಮಾಡಿ, ದುರಸ್ಥಿ ಕಾರ್ಯಗಳ ಅಂದಾಜು ಪಟ್ಟಿಯನ್ನು ಲ್ಯಾಂಡ್ ಆರ್ಮಿ ಅಥವಾ ನಿರ್ಮಿತಿ ಕೇಂದ್ರ ಅಥವಾ ಲೋಕೋಪಯೋಗಿ ಇಲಾಖೆ ಅಥವಾ **KHSRDP,** ರಾಯಚೂರು ಇವರ ಮುಖಾಂತರ ಸಿದ್ಧಪಡಿಸಿ, ದುರಸ್ಥಿ ಕಾರ್ಯಗಳನ್ನು ಕೈಗೊಳ್ಳಲು ಆಡಳಿತ ಮಂಡಳಿಯು ಅನುಮೋದನೆ ನೀಡಿತು.

| | | |
|---|---|---|
| (ಡಾ.ಕವಿತಾ ಪಾಟೀಲ್)<br>ನಿರ್ದೇಶಕರು,<br>ರಿಮ್ಸ್, ರಾಯಚೂರು<br>ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ರಿಮ್ಸ್ ಆಡಳಿತ ಮಂಡಳಿ ಸಭೆ,<br>ರಾಯಚೂರು | (ಎನ್.ಶಿವ ಶೈಲಂ) ಭಾ.ಆ.ಸೇ<br>ಸರ್ಕಾರದ ಕಾರ್ಯದರ್ಶಿಗಳು,<br>ಆಕುಕ, ವೈದ್ಯಕೀಯ ಶಿಕ್ಷಣ,<br>ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ<br>ಮಂಡಳಿ ಸಭೆ, ರಾಯಚೂರು | (ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),<br>ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ<br>ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,<br>ರಿಮ್ಸ್, ರಾಯಚೂರು |

2) ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಅತಿಥಿ ಗೃಹವನ್ನು ಪರೀಕ್ಷಾ ಸಮಯದಲ್ಲಿ ಪರೀಕ್ಷಾ ಮೇಲ್ವಿಚಾರಿಕರ ವಾಸ್ತವ್ಯಕ್ಕಾಗಿ ಉಪಯೋಗಿಸುವ ಬಗ್ಗೆ.

ಸಭೆಯ ತೀರ್ಮಾನ :-

ರಾಜೀವ್ ಗಾಂಧಿ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಅವರಣದಲ್ಲಿರುವ ಅತಿಥಿ ಗೃಹವನ್ನು ರಿಮ್ಸ್ ಸಂಸ್ಥೆಯ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಪರೀಕ್ಷೆಗಳ ಸಮಯದಲ್ಲಿ ಪರೀಕ್ಷಾ ಮೇಲ್ವಿಚಾರಿಕರ ವಾಸ್ತವ್ಯಕ್ಕಾಗಿ ಉಪಯೋಗಿಸಿ ಕೊಳ್ಳಲು ಆಡಳಿತ ಮಂಡಳಿಯು ಅನುಮೋದನೆ ನೀಡಿತು.

3) ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ ವಿಮಾ ಸೌಲಭ್ಯವನ್ನು ಒದಗಿಸುವ ಬಗ್ಗೆ.

ಸಭೆಯ ತೀರ್ಮಾನ :-

ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿಗಳಿಗೆ **New Pension Scheme, Group Insurance & Arogya Shree** ಸೌಲಭ್ಯಗಳನ್ನು ~~ಜಾರಿ(ಮಾಡಲು)~~ ಒದಗಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ನಿರ್ದೇಶಕರು, ರಿಮ್ಸ್, ರಾಯಚೂರು ಇವರಿಗೆ ಆಡಳಿತ ಮಂಡಳಿಯು ಅನುಮೋದನೆ ನೀಡಿತು.

ಆಡಳಿತ ಮಂಡಳಿಯು ವಂದನೆಗಳೊಂದಿಗೆ ಮುಕ್ತಾಯವಾಯಿತು.

| | | |
|---|---|---|
| (ಡಾ.ಕವಿತಾ ಪಾಟೀಲ್)<br>ನಿರ್ದೇಶಕರು,<br>ರಿಮ್ಸ್, ರಾಯಚೂರು<br>ಹಾಗೂ ಸದಸ್ಯ ಕಾರ್ಯದರ್ಶಿಗಳು,<br>ರಿಮ್ಸ್ ಆಡಳಿತ ಮಂಡಳಿ ಸಭೆ,<br>ರಾಯಚೂರು | (ಎನ್.ಶಿವ ಶೈಲಂ) ಭಾ.ಆ.ಸೇ<br>ಸರ್ಕಾರದ ಕಾರ್ಯದರ್ಶಿಗಳು,<br>ಆಕುಕ, ವೈದ್ಯಕೀಯ ಶಿಕ್ಷಣ,<br>ಹಾಗೂ ಉಪಾಧ್ಯಕ್ಷರು, ರಿಮ್ಸ್ ಆಡಳಿತ<br>ಮಂಡಳಿ ಸಭೆ, ರಾಯಚೂರು | (ಡಾ. ಶರಣ ಪ್ರಕಾಶ್ ರುದ್ರಪ್ಪ ಪಾಟೀಲ),<br>ವೈದ್ಯಕೀಯ ಶಿಕ್ಷಣ ಸಚಿವರು, ಹಾಗೂ<br>ಅಧ್ಯಕ್ಷರು, ಆಡಳಿತ ಮಂಡಳಿ ಸಭೆ,<br>ರಿಮ್ಸ್, ರಾಯಚೂರು |